International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

# ಪ್ರಗತಿಶೀಲ ಸಾಹಿತ್ಯ ಮತ್ತು ಚಿತ್ರಕಲೆಯಲ್ಲಿ ಸಾಮಾಜಿಕ ವಾಸ್ತವದ ಅಭಿವ್ಯಕ್ತಿ: ಶೋಷಿತ ಬದುಕು, ವರ್ಗಸಂಘರ್ಷ ಮತ್ತು ಮಾನವೀಯತೆಯ ನೆಲೆಗಳು

**ಕೃಷ್ಣಪ್ಪ ಕೆ.ಎನ್.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – ೫೬೦೦೫೬

**ಸಾರಲೇಖ (Abstract):**

ಕನ್ನಡ ಸಾಹಿತ್ಯದ ಆಧುನಿಕ ಬೆಳವಣಿಗೆಯಲ್ಲಿ ನವೋದಯ, ಪ್ರಗತಿಶೀಲ ಮತ್ತು ನವ್ಯ ಚಳುವಳಿಗಳು ಮಹತ್ವದ ಘಟ್ಟಗಳಾಗಿವೆ. ಇವುಗಳಲ್ಲಿ ಪ್ರಗತಿಶೀಲ ಸಾಹಿತ್ಯವು ನವೋದಯದ ಮಾನವೀಯ ಮೌಲ್ಯಗಳನ್ನು ಸಾಮಾಜಿಕ ವಾಸ್ತವದ ನೆಲೆಗೆ ತಂದು, ಮುಂದಿನ ನವ್ಯ ಸಾಹಿತ್ಯಕ್ಕೆ ಅಗತ್ಯವಾದ ಪ್ರಶ್ನಿಸುವ ಮನೋಭಾವವನ್ನು ರೂಪಿಸಿತು. ಸಮಾಜದಲ್ಲಿನ ಬಡತನ, ಹಸಿವು, ಶೋಷಣೆ, ವರ್ಗಭೇದ, ಜಾತಿವ್ಯವಸ್ಥೆ, ವೇಶ್ಯಾ ಸಮಸ್ಯೆ, ವಿಧವಾ ಸಮಸ್ಯೆ, ಮಹಿಳೆಯರ ಮೇಲಿನ ದೌರ್ಜನ್ಯ, ಕಾರ್ಮಿಕರ ಶೋಷಣೆ, ರೈತರ ಹೋರಾಟ, ಭಿಕ್ಷಾಟನೆ ಮತ್ತು ಕೌಟುಂಬಿಕ ವಿಘಟನೆ ಮುಂತಾದ ಸಮಸ್ಯೆಗಳನ್ನು ಪ್ರಗತಿಶೀಲ ಸಾಹಿತಿಗಳು ತಮ್ಮ ಕೃತಿಗಳ ಕೇಂದ್ರವಸ್ತುವನ್ನಾಗಿ ಮಾಡಿಕೊಂಡರು. ಸಾಹಿತ್ಯವು ಕೇವಲ ಮನರಂಜನೆ ಅಥವಾ ಸೌಂದರ್ಯಾನುಭವದ ಸಾಧನವಲ್ಲ; ಅದು ಸಮಾಜದ ವಾಸ್ತವವನ್ನು ಗುರುತಿಸಿ, ಶೋಷಿತರ ಪರವಾಗಿ ಧ್ವನಿ ಎತ್ತುವ ಸಾಮಾಜಿಕ ಮಾಧ್ಯಮವೂ ಆಗಬಹುದು ಎಂಬ ಅರಿವು ಈ ಚಳುವಳಿಯ ಪ್ರಮುಖ ಕೊಡುಗೆಯಾಗಿದೆ.

ಅದೇ ಸಂದರ್ಭದಲ್ಲಿ ಚಿತ್ರಕಲೆಯಲ್ಲಿಯೂ ಸಾಮಾಜಿಕ ವಾಸ್ತವದ ಕಡೆಗೆ ಗಮನ ಹರಿಯಿತು. ಕಲಾವಿದರು ಜನಸಾಮಾನ್ಯರ ಬದುಕು, ಬಡತನ, ಭಿಕ್ಷಾಟನೆ, ಕಾರ್ಮಿಕರ ದುಸ್ಥಿತಿ, ಮಹಿಳೆಯರ ಶೋಷಣೆ ಮತ್ತು ಸಾಮಾಜಿಕ ಅಸಮಾನತೆಯನ್ನು ತಮ್ಮ ಕಲಾಕೃತಿಗಳಲ್ಲಿ ಅಭಿವ್ಯಕ್ತಿಸಿದರು. ಸಾಹಿತ್ಯ ಮತ್ತು ಚಿತ್ರಕಲೆ ವಿಭಿನ್ನ ಮಾಧ್ಯಮಗಳಾಗಿದ್ದರೂ ಅವುಗಳ ಸಾಮಾಜಿಕ ಸಂವೇದನೆಯಲ್ಲಿ ಹಲವು ಸಾಮ್ಯತೆಗಳಿವೆ. ಪ್ರಗತಿಶೀಲ ಸಾಹಿತ್ಯದಲ್ಲಿ ಕಥೆ, ಕಾದಂಬರಿ ಮತ್ತು ಪಾತ್ರಗಳ ಮೂಲಕ ವ್ಯಕ್ತವಾದ ಶೋಷಿತ ಬದುಕು ಚಿತ್ರಕಲೆಯಲ್ಲಿ ರೇಖೆ, ಆಕಾರ, ಬಣ್ಣ, ಸಂಯೋಜನೆ ಮತ್ತು ಸಂಕೇತಗಳ ಮೂಲಕ ಅಭಿವ್ಯಕ್ತಿಯಾಗಿದೆ. ಹೀಗಾಗಿ ಸಾಹಿತ್ಯ ಮತ್ತು ಚಿತ್ರಕಲೆ ಎರಡೂ ಸಮಕಾಲೀನ ಸಮಾಜದ ನೋವು, ಸಂಘರ್ಷ ಮತ್ತು ಬದಲಾವಣೆಯ ಆಶಯವನ್ನು ಪ್ರತಿಬಿಂಬಿಸುವ ಸೃಜನಶೀಲ ಮಾಧ್ಯಮಗಳಾಗಿ ರೂಪುಗೊಂಡಿವೆ. ಈ ಪ್ರಬಂಧವು ಪ್ರಗತಿಶೀಲ ಸಾಹಿತ್ಯ ಮತ್ತು ಚಿತ್ರಕಲೆಯಲ್ಲಿ ವ್ಯಕ್ತವಾಗಿರುವ ಸಾಮಾಜಿಕ ವಾಸ್ತವ, ವರ್ಗಸಂಘರ್ಷ, ಮಹಿಳಾ ಶೋಷಣೆ, ವೇಶ್ಯಾ ಸಮಸ್ಯೆ, ವಿಧವಾ ಬದುಕು, ರೈತ-ಕಾರ್ಮಿಕರ ಹೋರಾಟ ಮತ್ತು ಬಡತನದ ವಿವಿಧ ಆಯಾಮಗಳನ್ನು ತೌಲನಿಕವಾಗಿ ವಿಶ್ಲೇಷಿಸುತ್ತದೆ.

ಪ್ರಮುಖ ಪದಗಳು

**Keywords:** ಪ್ರಗತಿಶೀಲ ಸಾಹಿತ್ಯ, ಸಾಮಾಜಿಕ ವಾಸ್ತವ, ಚಿತ್ರಕಲೆ, ವರ್ಗಸಂಘರ್ಷ, ಮಹಿಳಾ ಶೋಷಣೆ, ವೇಶ್ಯಾ ಸಮಸ್ಯೆ, ರೈತ ಹೋರಾಟ, ಕಾರ್ಮಿಕ ಸಮಸ್ಯೆ, ಬಡತನ, ಮಾನವೀಯತೆ

## ಪ್ರಸ್ತಾವನೆ (Introduction):

ಕನ್ನಡ ಸಾಹಿತ್ಯದ ಆಧುನಿಕ ಚರಿತ್ರೆಯನ್ನು ಗಮನಿಸಿದಾಗ ವಿವಿಧ ಕಾಲಘಟ್ಟಗಳಲ್ಲಿ ಸಾಹಿತ್ಯದ ಸ್ವರೂಪ, ಆಶಯ, ಭಾಷೆ ಮತ್ತು ಸಾಮಾಜಿಕ ಕಾಳಜಿಗಳಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿರುವುದು ಕಂಡುಬರುತ್ತದೆ. ನವೋದಯ ಸಾಹಿತ್ಯವು ಭಾರತೀಯ ಪರಂಪರೆ, ಮಾನವೀಯತೆ, ಪ್ರಕೃತಿ, ವ್ಯಕ್ತಿತ್ವ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಕೇಂದ್ರವಾಗಿಟ್ಟುಕೊಂಡು ಹೊಸ ಸಾಹಿತ್ಯಿಕ ವಾತಾವರಣವನ್ನು ನಿರ್ಮಿಸಿತು. ಆದರೆ

ಸಮಾಜದ ನೈಜ ಬದುಕಿನಲ್ಲಿ ಕಾಣಿಸಿಕೊಂಡ ಬಡತನ, ಶೋಷಣೆ, ವರ್ಗವೈಷಮ್ಯ, ಮಹಿಳೆಯರ ಅಸಮಾನತೆ, ಕಾರ್ಮಿಕರ ದುಸ್ಥಿತಿ, ಜಮೀನ್ದಾರರ ದಬ್ಬಾಳಿಕೆ ಮುಂತಾದ ಪ್ರಶ್ನೆಗಳು ಸಾಹಿತ್ಯವನ್ನು ಇನ್ನಷ್ಟು ಸಾಮಾಜಿಕ ವಾಸ್ತವದ ಕಡೆಗೆ ಕೊಂಡೊಯ್ದವು. ಈ ಹಿನ್ನೆಲೆಯಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಮಹತ್ವ ಪಡೆದಿತು.

ನವೋದಯ ಹಾಗೂ ನವ್ಯ ಸಾಹಿತ್ಯಗಳ ನಡುವೆ ಪ್ರಗತಿಶೀಲ ಸಾಹಿತ್ಯವು ಒಂದು ರೀತಿಯ ಸೇತುವೆಯಾಗಿ ಕಾರ್ಯನಿರ್ವಹಿಸಿತು. ನವೋದಯದ ಮಾನವೀಯ ದೃಷ್ಟಿಯನ್ನು ಮುಂದುವರಿಸಿಕೊಂಡು ಸಮಾಜದ ವಾಸ್ತವ ಸಮಸ್ಯೆಗಳನ್ನು ನೇರವಾಗಿ ಎದುರಿಸುವ ಪ್ರಯತ್ನ ಪ್ರಗತಿಶೀಲ ಸಾಹಿತ್ಯದಲ್ಲಿ ನಡೆಯಿತು. ಮತ್ತೊಂದೆಡೆ ವ್ಯಕ್ತಿಯ ಅಂತರಂಗ, ಅಸ್ತಿತ್ವ, ಸಂಕೀರ್ಣ ಮನಸ್ಸು ಮತ್ತು ಆಧುನಿಕ ಬದುಕಿನ ವಿಚಿತ್ರತೆಗಳನ್ನು ಪ್ರಶ್ನಿಸುವ ನವ್ಯ ಸಾಹಿತ್ಯಕ್ಕೆ ಅಗತ್ಯವಾದ ಸಾಮಾಜಿಕ ಮತ್ತು ವೈಚಾರಿಕ ನೆಲೆಯನ್ನು ಪ್ರಗತಿಶೀಲ ಚಿಂತನೆ ಸಿದ್ಧಪಡಿಸಿತು. ಈ ಕಾರಣದಿಂದ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಗತಿಶೀಲ ಸಾಹಿತ್ಯವನ್ನು ಒಂದು ಮಧ್ಯಂತರ ಚಳುವಳಿಯೆಂದು ಮಾತ್ರ ಪರಿಗಣಿಸುವುದು ಸಮರ್ಪಕವಲ್ಲ. ಅದು ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯ ಕುರಿತು ಗಂಭೀರವಾದ ಚರ್ಚೆಯನ್ನು ಹುಟ್ಟುಹಾಕಿದ ಮಹತ್ವದ ಹಂತವಾಗಿದೆ.

ಬಸವರಾಜ ಕಟ್ಟೀಮನಿಯವರ ಪ್ರಕಾರ, “ವಾಸ್ತವ ಪರಿಸ್ಥಿತಿಗೆ ಕಣ್ಣು, ಕಿವಿ ತೆರೆದಿಟ್ಟು ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿ ನೀಡುವಂಥ ಕೃತಿ ರಚಿಸುವುದೇ ಪ್ರಗತಿಶೀಲತೆ.” ಈ ಮಾತಿನಲ್ಲಿ ಪ್ರಗತಿಶೀಲ ಸಾಹಿತ್ಯದ ಮೂಲ ಆಶಯ ಅಡಕವಾಗಿದೆ. ವಾಸ್ತವವನ್ನು ಕೇವಲ ದಾಖಲಿಸುವುದಷ್ಟೇ ಅಲ್ಲದೆ, ಆ ವಾಸ್ತವದ ಹಿಂದೆ ಇರುವ ಶೋಷಣಾ ವ್ಯವಸ್ಥೆಗಳನ್ನು ಗುರುತಿಸುವುದು ಮತ್ತು ಉತ್ತಮ ಬದುಕಿನ ಸಾಧ್ಯತೆಯನ್ನು ಸೂಚಿಸುವುದು ಅದರ ಮುಖ್ಯ ಉದ್ದೇಶವಾಗಿದೆ. ಹೀಗಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಬಡವನು ಕೇವಲ ಕರುಣೆಗೆ ಪಾತ್ರನಾಗುವುದಿಲ್ಲ; ಅವನು ತನ್ನ ಬದುಕಿನ ಹಕ್ಕಿಗಾಗಿ ಹೋರಾಡುವ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ರೈತನು ಕೇವಲ ಪ್ರಕೃತಿಯೊಂದಿಗೆ ಹೋರಾಡುವ ಮನುಷ್ಯನಲ್ಲ; ಅವನು ಜಮೀನ್ದಾರ, ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಯ ವಿರುದ್ಧ ಹೋರಾಡುವ ವರ್ಗದ ಪ್ರತಿನಿಧಿಯಾಗುತ್ತಾನೆ. ಕಾರ್ಮಿಕನು ಕೇವಲ ಕೂಲಿ ಪಡೆಯುವ ವ್ಯಕ್ತಿಯಲ್ಲ; ಉತ್ಪಾದನಾ ವ್ಯವಸ್ಥೆಯಲ್ಲಿ ತನ್ನ ಹಕ್ಕನ್ನು ಕೇಳುವ ಶ್ರಮಜೀವಿಯಾಗುತ್ತಾನೆ. ಮಹಿಳೆ ಕೇವಲ ಕುಟುಂಬದ ಪಾತ್ರವಲ್ಲ; ಪಿತೃಪ್ರಧಾನ ವ್ಯವಸ್ಥೆಯಿಂದ ಶೋಷಿತಳಾಗಿರುವ ವ್ಯಕ್ತಿತ್ವವಾಗಿ ಸಾಹಿತ್ಯದಲ್ಲಿ ರೂಪುಗೊಳ್ಳುತ್ತಾಳೆ.

ಈ ಸಾಮಾಜಿಕ ದೃಷ್ಟಿಕೋನವು ಚಿತ್ರಕಲೆಯಲ್ಲಿಯೂ ಸಮಾನಾಂತರವಾಗಿ

ವ್ಯಕ್ತವಾಗಿದೆ. ಜನಜೀವನದಿಂದ ದೂರವಿದ್ದ ಕಲಾ ಸೌಂದರ್ಯದ ಬದಲಿಗೆ ಜನಸಾಮಾನ್ಯರ ಬದುಕು, ದುಃಖ, ಹಸಿವು, ಬಡತನ, ಯುದ್ಧ, ನಿರಾಶ್ರಿತತೆ ಮತ್ತು ಶೋಷಣೆಯ ಕಡೆಗೆ ಕಲಾವಿದರ ದೃಷ್ಟಿ ಹರಿಯಿತು. ಕೆ.ಕೆ. ಹೆಬ್ಬಾರ್ ಮತ್ತು ಆರ್.ಎಂ. ಹಡಪದ್ ಅವರಂತಹ ಕಲಾವಿದರ ಕೃತಿಗಳಲ್ಲಿ ಈ ಸಾಮಾಜಿಕ ಸಂವೇದನೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅವರು ನೇರವಾಗಿ ಪ್ರಗತಿಶೀಲ ಚಳುವಳಿಯ ಭಾಗವಾಗಿರದಿದ್ದರೂ, ಅವರ ಕಲಾಕೃತಿಗಳಲ್ಲಿ ವ್ಯಕ್ತವಾಗಿರುವ ಮಾನವೀಯ ಕಾಳಜಿ ಮತ್ತು ಸಾಮಾಜಿಕ ವಾಸ್ತವದ ನಿರೂಪಣೆ ಪ್ರಗತಿಶೀಲ ಸಾಹಿತ್ಯದ ಆಶಯಗಳೊಂದಿಗೆ ಹಲವು ರೀತಿಯಲ್ಲಿ ಸಂಬಂಧ ಹೊಂದುತ್ತದೆ.

**ಪ್ರಗತಿಶೀಲ ಸಾಹಿತ್ಯದ ಸಾಮಾಜಿಕ ಹಿನ್ನೆಲೆ:**

ಪ್ರಗತಿಶೀಲ ಸಾಹಿತ್ಯದ ಚಿಂತನೆಯ ಹಿಂದೆ ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳ ಪ್ರಭಾವವಿತ್ತು. ಫ್ಯಾಸಿಸ್ಟ್ ಶಕ್ತಿಗಳ ದಬ್ಬಾಳಿಕೆ, ಯುದ್ಧದ ಭೀಕರತೆ, ಬಂಡವಾಳಶಾಹಿಯ ವಿಸ್ತರಣೆ, ಕಾರ್ಮಿಕ ವರ್ಗದ ಹೋರಾಟ ಮತ್ತು ಸಮಾಜವಾದಿ ಚಿಂತನೆಗಳು ವಿಶ್ವದ ಬೌದ್ಧಿಕ ವಲಯದಲ್ಲಿ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದವು. ಭಾರತೀಯ ಸಂದರ್ಭದಲ್ಲಿ ವಸಾಹತುಶಾಹಿ, ಊಳಿಗಮಾನ್ಯ ವ್ಯವಸ್ಥೆ, ಜಮೀನ್ದಾರಿಕೆ, ಜಾತಿ ಅಸಮಾನತೆ ಮತ್ತು ಬಡತನದಂತಹ ಸಮಸ್ಯೆಗಳು ಪ್ರಗತಿಶೀಲ ಸಾಹಿತ್ಯದ ವಸ್ತುಗಳಾದವು.

ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಸಂದರ್ಭವೂ ಈ ಸಾಹಿತ್ಯಕ್ಕೆ ಮಹತ್ವದ ಹಿನ್ನೆಲೆಯಾಯಿತು. ರಾಜಕೀಯ ಸ್ವಾತಂತ್ರ್ಯ ಮಾತ್ರ ಸಾಕಾಗುವುದಿಲ್ಲ; ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವೂ ಅಗತ್ಯ ಎಂಬ ಚಿಂತನೆ ಬೆಳೆಯಿತು. ದೇಶ ಸ್ವತಂತ್ರವಾದರೂ ಬಡತನ, ಹಸಿವು, ಜಾತಿ, ವರ್ಗ ಮತ್ತು ಲಿಂಗ ಅಸಮಾನತೆ ಮುಂದುವರಿದರೆ ಸ್ವಾತಂತ್ರ್ಯದ ಅರ್ಥವೇನು ಎಂಬ ಪ್ರಶ್ನೆ ಪ್ರಗತಿಶೀಲ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು.

ಕನ್ನಡದಲ್ಲಿ ಅ.ನ.ಕೃ., ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಶ್ರೀರಂಗ ಮೊದಲಾದವರು ಪ್ರಗತಿಶೀಲ ಸಾಹಿತ್ಯದ ಪ್ರಮುಖ ಪ್ರತಿನಿಧಿಗಳಾದರು. ವಿಶೇಷವಾಗಿ ಕಾದಂಬರಿ ಮತ್ತು ಕಥಾಸಾಹಿತ್ಯವು ಅವರ ಕೈಯಲ್ಲಿ ಸಾಮಾಜಿಕ ವಾಸ್ತವದ ಪರಿಣಾಮಕಾರಿ ಮಾಧ್ಯಮವಾಯಿತು. ಅವರು ಸಾಮಾನ್ಯ ಮನುಷ್ಯನ ಬದುಕನ್ನು ಸಾಹಿತ್ಯದ ಕೇಂದ್ರಕ್ಕೆ ತಂದರು. ಹಿಂದೆ ಸಾಹಿತ್ಯದಲ್ಲಿ ಅಂಚಿನಲ್ಲಿದ್ದ ಪಾತ್ರಗಳು ಇವರ ಕೃತಿಗಳಲ್ಲಿ ಮುಖ್ಯ ಪಾತ್ರಗಳಾದವು.

ಆದರೆ ಪ್ರಗತಿಶೀಲ ಕಾವ್ಯದ ಬೆಳವಣಿಗೆಗೆ ಸಮಕಾಲೀನ ವಿಮರ್ಶಾ ವಲಯದಿಂದ ಅಗತ್ಯವಾದ ತಾತ್ವಿಕ ಬೆಂಬಲ ದೊರೆಯಲಿಲ್ಲ ಎಂಬ ಅಭಿಪ್ರಾಯವೂ ಗಮನಾರ್ಹವಾಗಿದೆ. ಸಾಮಾಜಿಕ ಕಾಳಜಿಯುಳ್ಳ ಕಾವ್ಯವನ್ನು 'ಪ್ರಚಾರ ಕಾವ್ಯ' ಅಥವಾ ಎರಡನೆಯ ದರ್ಜೆಯ ಕಾವ್ಯವೆಂದು ನೋಡುವ

International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

ಪ್ರವೃತ್ತಿ ಕಂಡುಬಂದಿತು. ಇದರಿಂದ ಪ್ರಗತಿಶೀಲ ಕಾವ್ಯದ ಬೆಳವಣಿಗೆ ನಿರೀಕ್ಷಿತ ಮಟ್ಟದಲ್ಲಿ ಸ್ಥಿರವಾಗಲಿಲ್ಲ. ಆದರೂ ಕಥೆ ಮತ್ತು ಕಾದಂಬರಿಗಳಲ್ಲಿ ಪ್ರಗತಿಶೀಲ ಚಿಂತನೆ ಗಟ್ಟಿಯಾಗಿ ನೆಲೆಯೂರಿತು.

**ಪ್ರಗತಿಶೀಲ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ:**

ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲಕ್ಷಣ ಸಾಮಾಜಿಕ ವಾಸ್ತವ. ಸಮಾಜದ ಸಮಸ್ಯೆಗಳನ್ನು ಸುಂದರೀಕರಿಸುವ ಬದಲು ಅವುಗಳ ಕಠಿಣತೆಯನ್ನು ನೇರವಾಗಿ ಚಿತ್ರಿಸುವುದು ಅದರ ವೈಶಿಷ್ಟ್ಯ. ಬಡತನ, ಹಸಿವು, ಅನ್ಯಾಯ, ದೌರ್ಜನ್ಯ ಮತ್ತು ಶೋಷಣೆಯನ್ನು ಬದುಕಿನ ನೈಜ ಸಂದರ್ಭಗಳಲ್ಲಿ ನಿರೂಪಿಸುವ ಮೂಲಕ ಸಾಹಿತ್ಯವು ಸಮಾಜದ ಕನ್ನಡಿ ಮಾತ್ರವಲ್ಲದೆ ಪ್ರಶ್ನಿಸುವ ಸಾಧನವಾಯಿತು.

ಪ್ರಗತಿಶೀಲ ಸಾಹಿತ್ಯದಲ್ಲಿ ವ್ಯಕ್ತಿಯ ಸಮಸ್ಯೆ ಬಹುಪಾಲು ಸಾಮಾಜಿಕ ವ್ಯವಸ್ಥೆಯೊಂದಿಗೆ ಸಂಬಂಧ ಹೊಂದಿದೆ. ಒಬ್ಬ ಮಹಿಳೆ ವೇಶ್ಯಾವೃತ್ತಿಗೆ ಬೀಳುವುದು ಅವಳ ವೈಯಕ್ತಿಕ ನೈತಿಕ ದೌರ್ಬಲ್ಯದಿಂದ ಮಾತ್ರವಲ್ಲ; ಬಡತನ, ವಿಧವತ್ವ, ಅನಕ್ಷರತೆ, ಪುರುಷಶೋಷಣೆ ಮತ್ತು ಆರ್ಥಿಕ ಅಸಹಾಯಕತೆಯ ಪರಿಣಾಮವೂ ಆಗಿರಬಹುದು. ಒಬ್ಬ ರೈತ ಸಾಲದಲ್ಲಿ ಸಿಲುಕುವುದು ಅವನ ವೈಯಕ್ತಿಕ ಅಸಮರ್ಥತೆಯ ಫಲವಲ್ಲ; ಜಮೀನ್ದಾರಿ, ಮಾರುಕಟ್ಟೆ ಮತ್ತು ಶೋಷಕ ಆರ್ಥಿಕ ವ್ಯವಸ್ಥೆಯ ಪರಿಣಾಮವಾಗಿರಬಹುದು. ಇದೇ ದೃಷ್ಟಿಕೋನ ಪ್ರಗತಿಶೀಲ ಸಾಹಿತ್ಯವನ್ನು ನೈತಿಕ ಉಪದೇಶದ ಸಾಹಿತ್ಯದಿಂದ ಸಾಮಾಜಿಕ ವಿಶ್ಲೇಷಣೆಯ ಸಾಹಿತ್ಯವನ್ನಾಗಿ ಮಾಡುತ್ತದೆ.

**ವೇಶ್ಯಾ ಸಮಸ್ಯೆ: ದೇಹದ ವ್ಯಾಪಾರದಿಂದ ಸಾಮಾಜಿಕ ಶೋಷಣೆಯವರೆಗೆ:**

ಪ್ರಗತಿಶೀಲ ಸಾಹಿತ್ಯದಲ್ಲಿ ವೇಶ್ಯಾ ಸಮಸ್ಯೆ ಅತ್ಯಂತ ಪ್ರಮುಖ ಸಾಮಾಜಿಕ ವಸ್ತುವಾಗಿದೆ. ಈ ಸಮಸ್ಯೆಯನ್ನು ಕೇವಲ ನೈತಿಕ ದೃಷ್ಟಿಯಿಂದ ನೋಡುವ ಬದಲು ಅದರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ಶೋಧಿಸುವ ಪ್ರಯತ್ನ ನಡೆಯಿತು. ಅ.ನ.ಕೃ. ಅವರ 'ಸಂಜೆಗತ್ತಲು' ಈ ಹಿನ್ನೆಲೆಯಲ್ಲಿ ಗಮನಾರ್ಹವಾಗಿದೆ. ವೇಶ್ಯಾ ಸಮಸ್ಯೆಯ ಹಿಂದೆ ಗಂಡಿನ ಶೋಷಣಾ ಮನೋಭಾವವಿದೆ ಎಂಬುದನ್ನು ಅವರು ಗುರುತಿಸುತ್ತಾರೆ. ಮಹಿಳೆಯ ದೇಹವನ್ನು ವಸ್ತುವನ್ನಾಗಿ ಪರಿಗಣಿಸುವ ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಅವರ ಸಾಹಿತ್ಯ ಧ್ವನಿ ಎತ್ತುತ್ತದೆ.

'ನಗ್ನ ಸತ್ಯ' ಕಾದಂಬರಿಯಲ್ಲಿಯೂ ಮಹಿಳೆಯ ದೇಹದ ವ್ಯಾಪಾರ ಹೇಗೆ ಸಂಘಟಿತ ಶೋಷಣೆಯ ರೂಪ ಪಡೆಯುತ್ತದೆ ಎಂಬುದನ್ನು ಕಾಣಬಹುದು. ಅಚ್ಚಮ್ಮ, ಕಮಲ, ಗಂಗೆ, ಮುತ್ತಮ್ಮನ ಬಂಧನದಲ್ಲಿರುವ ಮಹಿಳೆಯರು ತಮ್ಮ ಸ್ವಂತ ಇಚ್ಛೆಯಿಂದ ಆ ವೃತ್ತಿಗೆ ಬಂದವರಲ್ಲ. ವಿಧವತ್ವ, ಬಡತನ, ತಾಯಿಯ ಧನದಾಸೆ ಮತ್ತು ಸಾಮಾಜಿಕ ಅಸಹಾಯಕತೆ

ಅವರನ್ನು ಆ ದಾರಿಗೆ ತಳ್ಳುತ್ತವೆ. ಕಮಲಳ ಬದುಕು ವಿಶೇಷವಾಗಿ ದುರಂತಮಯವಾಗಿದೆ. ಶ್ರೀನಾಥ ಅವಳನ್ನು ರಕ್ಷಿಸಲು ಪ್ರಯತ್ನಿಸಿದರೂ ವ್ಯವಸ್ಥೆಯ ಶಕ್ತಿಯ ಮುಂದೆ ಅವನ ವೈಯಕ್ತಿಕ ಪ್ರಯತ್ನ ವಿಫಲವಾಗುತ್ತದೆ. ಅಂತಿಮವಾಗಿ ಕಮಲ ಕಾಯಿಲೆಯಿಂದ ಮರಣಹೊಂದುತ್ತಾಳೆ. ಹೀಗಾಗಿ 'ನಗ್ನ ಸತ್ಯ' ವೈಯಕ್ತಿಕ ಪ್ರೇಮಕಥೆಯಲ್ಲ; ಅದು ಮಹಿಳೆಯ ದೇಹವನ್ನು ಮಾರುಕಟ್ಟೆಯ ವಸ್ತುವನ್ನಾಗಿ ಮಾಡುವ ವ್ಯವಸ್ಥೆಯ ಕಲಾತ್ಮಕ ಅನಾವರಣವಾಗಿದೆ.

ಅ.ನ.ಕೃ. ಅವರ 'ಜೀವನ ಯಾತ್ರೆ'ಯಲ್ಲಿಯೂ ರಾಮಕ್ಕ, ಸುಂದರಿ ಮತ್ತು ಲಲಿತೆಯಂತಹ ಪಾತ್ರಗಳ ಮೂಲಕ ಬಡತನ, ವಯಸ್ಸಿನ ಅಸಮಾನತೆ, ಪುರುಷರ ಲೈಂಗಿಕ ಸ್ವಾರ್ಥ ಮತ್ತು ಸಾಮಾಜಿಕ ಅಸಹಾಯಕತೆಯನ್ನು ನಿರೂಪಿಸಲಾಗಿದೆ. ಹೆಣ್ಣಿನ ದೇಹದ ಮೇಲೆ ಪುರುಷನ ಹಕ್ಕು ಎನ್ನುವ ಮನೋಭಾವವು ವೇಶ್ಯಾ ಸಮಸ್ಯೆಯ ಆಂತರಿಕ ಕಾರಣಗಳಲ್ಲಿ ಒಂದಾಗಿದೆ ಎಂಬುದು ಈ ಕೃತಿಗಳಿಂದ ಸ್ಪಷ್ಟವಾಗುತ್ತದೆ.

ತ.ರಾ.ಸು. ಅವರ 'ಮಸಣದ ಹೂವು' ವೇಶ್ಯಾ ಸಮಸ್ಯೆಯನ್ನು ಇನ್ನಷ್ಟು ವೈಚಾರಿಕ ನೆಲೆಯಲ್ಲಿ ಪರಿಶೀಲಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸುವ ಬಡತನ ಮತ್ತು ದಾರಿದ್ರ್ಯವು ವೇಶ್ಯಾವೃತ್ತಿಗೆ ಕಾರಣವಾಗುತ್ತದೆ ಎಂಬ ವಿಚಾರ ಇಲ್ಲಿ ಮುಖ್ಯವಾಗಿದೆ. ಪಾರ್ವತಿಯಂತಹ ಮಹಿಳೆಯನ್ನು ಆ 'ಪಾಪಕೂಪ'ದಿಂದ ಹೊರತರಬೇಕೆಂಬ ಆಶಯ ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಸೂಚಿಸುತ್ತದೆ.

ನಿರಂಜನರ 'ಕೊನೆಯ ಗಿರಾಕಿ' ಕಥೆಯ ಕಾಣೆ ಈ ಸಮಸ್ಯೆಯ ಅತ್ಯಂತ ಹೃದಯವಿದ್ರಾವಕ ಪ್ರತಿನಿಧಿ. ಜಮೀನ್ದಾರನ ಒಕ್ಕಲಾಗಿದ್ದ ಕುಟುಂಬ ಬೀದಿಪಾಲಾಗುತ್ತದೆ. ಹಸಿವು ಅವರನ್ನು ಭಿಕ್ಷಾಟನೆಗೆ ತಳ್ಳುತ್ತದೆ. ಪ್ರೇಮದ ಹೆಸರಿನಲ್ಲಿ ಮೋಸಗೊಳ್ಳುವ ಕಾಣೆ ನಗರಕ್ಕೆ ಬಂದು ಕೊನೆಗೆ ದೇಹದ ವ್ಯಾಪಾರಕ್ಕೆ ತಳ್ಳಲ್ಪಡುತ್ತಾಳೆ. ರೋಗಪೀಡಿತಳಾದಾಗ ಅವಳನ್ನು ಬಳಸಿಕೊಂಡ ವ್ಯವಸ್ಥೆಯೇ ಅವಳನ್ನು ತಿರಸ್ಕರಿಸುತ್ತದೆ. ಕೊನೆಗೆ ಹಸಿವು ಮತ್ತು ರೋಗದಿಂದ ಅವಳು ಸಾಯುತ್ತಾಳೆ. ಮಾತು ಬಾರದ ಮೂಗಿ ಕಾಣೆಯ ಮೂಲಕ ಸಮಾಜದಲ್ಲಿ ಧ್ವನಿಯಿಲ್ಲದ ಮಹಿಳೆಯ ಸ್ಥಿತಿಯನ್ನು ನಿರಂಜನರು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

'ಅವಳಿಗೆ ಗೊತ್ತಿರಲಿಲ್ಲ' ಕಥೆಯಲ್ಲಿಯೂ ಹಳ್ಳಿಯ ಮುಗ್ಧ ವಿಧವೆ ನಗರಕ್ಕೆ ಬಂದಾಗ ಎದುರಿಸುವ ಶೋಷಣೆಯ ಚಿತ್ರಣವಿದೆ. ಹಸಿವು ಮತ್ತು ಅಸಹಾಯಕತೆ ಅವಳನ್ನು ವೇಶ್ಯಾವೃತ್ತಿಗೆ ತಳ್ಳುತ್ತದೆ. 'ಐದು ಮೈಲುಗಳಾಚೆ' ಕಥೆಯು ಸರ್ಕಾರದ ದ್ವಂದ್ವ ನೀತಿಯನ್ನು ಪ್ರಶ್ನಿಸುತ್ತದೆ. ವೇಶ್ಯಾವೃತ್ತಿಯನ್ನು ನಿರ್ಮೂಲ ಮಾಡುವ ಬದಲು ನಗರದಿಂದ ದೂರಕ್ಕೆ ಸ್ಥಳಾಂತರಿಸಿ ಪರವಾನಗಿ ನೀಡುವ ವ್ಯವಸ್ಥೆಯ ಮೂಲಕ ಸಮಸ್ಯೆಯನ್ನು ಮುಚ್ಚಿಡುವ ಆಡಳಿತದ ಮನೋಭಾವವನ್ನು ಕಥೆ ವ್ಯಂಗ್ಯವಾಗಿ ಅನಾವರಣಗೊಳಿಸುತ್ತದೆ.

ಬಸವರಾಜ ಕಟ್ಟೀಮನಿಯವರ 'ಖಾನಾವಳಿಯ ನೀಲಾ', 'ಬೀದಿಯಲ್ಲಿ ಬಿದ್ದವಳು', 'ಮೋಹದ ಬಲೆಯಲ್ಲಿ', 'ಪಾತರಗಿತ್ತಿ' ಮೊದಲಾದ ಕೃತಿಗಳಲ್ಲಿಯೂ ವೇಶ್ಯಾ ಸಮಸ್ಯೆ ಮತ್ತು ಮಹಿಳಾ ಶೋಷಣೆ ಪ್ರಮುಖವಾಗಿವೆ. ಮೂಢನಂಬಿಕೆ, ಆರ್ಥಿಕ ದುರ್ಬಲತೆ, ವಿಧವತ್ವ, ಅನಕ್ಷರತೆ ಮತ್ತು ಲೈಂಗಿಕ ಶೋಷಣೆ ಮಹಿಳೆಯನ್ನು ವೇಶ್ಯಾವೃತ್ತಿಗೆ ಹೇಗೆ ತಳ್ಳುತ್ತವೆ ಎಂಬುದನ್ನು ಅವರು ಚಿತ್ರಿಸುತ್ತಾರೆ. 'ಖಾನಾವಳಿಯ ನೀಲಾ'ಯಲ್ಲಿ ವಿದ್ಯಾವಂತ ನೀಲಾ ಗಂಡಿನ ಲೈಂಗಿಕ ಶೋಷಣೆಯಿಂದ ಹೊರಬರುವ ಸಾಮರ್ಥ್ಯ ಹೊಂದಿರುವುದು ಶಿಕ್ಷಣದ ಮುಕ್ತಿಶಕ್ತಿಯನ್ನು ಸೂಚಿಸುತ್ತದೆ.

ಚದುರಂಗರ 'ಇಪ್ಪತ್ತು ರೂಪಾಯಿ' ಮತ್ತು 'ತುಲಸಿ' ಕಥೆಗಳು ಈ ಸಮಸ್ಯೆಗೆ ಮಾನವೀಯ ಆಯಾಮವನ್ನು ಸೇರಿಸುತ್ತವೆ. 'ಇಪ್ಪತ್ತು ರೂಪಾಯಿ'ಯಲ್ಲಿ ತನ್ನಂತೆ ಇನ್ನೊಬ್ಬ ಮಹಿಳೆ ಈ ದುರಂತಕ್ಕೆ ಬಲಿಯಾಗಬಾರದೆಂಬ ಮಾನವೀಯ ಭಾವನೆಯಿಂದ ಹಣ ಕಳುಹಿಸುವ ಮಹಿಳೆಯ ಪಾತ್ರ ಗಮನಾರ್ಹವಾಗಿದೆ. 'ತುಲಸಿ'ಯಲ್ಲಿ ಬುಡನ್ ಸಾಬಿಯ ಮಾನವೀಯತೆ ಧರ್ಮ, ಜಾತಿ ಮತ್ತು ಸಾಮಾಜಿಕ ಗಡಿಗಳನ್ನು ಮೀರಿ ಮನುಷ್ಯತ್ವದ ಶಕ್ತಿಯನ್ನು ತೋರಿಸುತ್ತದೆ. ಹೀಗಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ವೇಶ್ಯಾ ಸಮಸ್ಯೆ ಕೇವಲ ಲೈಂಗಿಕ ಸಮಸ್ಯೆಯಲ್ಲ; ಅದು ಆರ್ಥಿಕ, ಸಾಮಾಜಿಕ, ಲಿಂಗ ಮತ್ತು ಮಾನವೀಯ ಸಮಸ್ಯೆಗಳ ಸಂಕೀರ್ಣ ರೂಪವಾಗಿದೆ.

**ಚಿತ್ರಕಲೆಯಲ್ಲಿ ವೇಶ್ಯಾ ಸಮಸ್ಯೆಯ ಪ್ರತಿಫಲನ:**

ಸಾಹಿತ್ಯದಲ್ಲಿ ಪದಗಳ ಮೂಲಕ ವ್ಯಕ್ತವಾದ ವೇಶ್ಯಾ ಸಮಸ್ಯೆ ಚಿತ್ರಕಲೆಯಲ್ಲಿ ಬಣ್ಣ, ಆಕಾರ, ದೇಹ ಮತ್ತು ಸಂಕೇತಗಳ ಮೂಲಕ ಅಭಿವ್ಯಕ್ತಿಯಾಗಿದೆ. ಆರ್.ಎಂ. ಹಡಪದ್ ಅವರ 'ಒರಗಿದ ಹೆಣ್ಣು', 'ಪಾಂಚಾಲಿ', 'ಹಕ್ಕಿ ಮತ್ತು ಮೊಗ್ಗು', 'ಶೋಷಣೆ' ಮೊದಲಾದ ಕೃತಿಗಳನ್ನು ಈ ದೃಷ್ಟಿಯಿಂದ ಗಮನಿಸಬಹುದು.

'ಒರಗಿದ ಹೆಣ್ಣು'ಯಲ್ಲಿ ಗಾಢ ಕೆಂಪು ಬಣ್ಣ, ಬೆತ್ತಲೆ ದೇಹ, ಹಾಸಿಗೆ, ಮದ್ಯದ ಗ್ಲಾಸು ಮತ್ತು ಹೂದಾನಿ ಇವೆಲ್ಲವೂ ವಿಲಾಸಿ ಬದುಕಿನ ಸಂಕೇತಗಳಾಗಿ ಕಾಣುತ್ತವೆ. ಆದರೆ ಈ ವಿಲಾಸದ ಹಿಂದೆ ಮಹಿಳೆಯ ದೇಹದ ವಸ್ತೀಕರಣ ಅಡಗಿದೆ. ಚಿತ್ರವನ್ನು ಕೇವಲ ಕಾಮದ ದೃಶ್ಯವೆಂದು ನೋಡುವುದಕ್ಕಿಂತ ಮಹಿಳೆಯ ದೇಹವು ಮಾರುಕಟ್ಟೆಯ ವಸ್ತುವಾಗುವ ಸಾಮಾಜಿಕ ಪರಿಸ್ಥಿತಿಯ ದೃಶ್ಯರೂಪವೆಂದು ಓದಬಹುದು.

'ಪಾಂಚಾಲಿ'ಯಲ್ಲಿ ಒಬ್ಬ ಮಹಿಳೆಯ ಸುತ್ತ ಹಲವು ಪುರುಷಾಕೃತಿಗಳು ಕಾಣಿಸುವುದು ಮಹಿಳೆಯ ದೇಹದ ಮೇಲೆ ಪುರುಷಪ್ರಧಾನ ಸಮಾಜ ಹೊಂದಿರುವ ಹಕ್ಕಿನ ಮನೋಭಾವವನ್ನು ಸಂಕೇತಿಸುತ್ತದೆ. 'ಹಕ್ಕಿ ಮತ್ತು ಮೊಗ್ಗು'ಯಲ್ಲಿ ಅಸಹಾಯಕವಾಗಿ ಕುಳಿತಿರುವ ಮಹಿಳೆ ಮತ್ತು ಅವಳ ಸಮೀಪದ

International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

ಹಕ್ಕಿಯ ಚಿತ್ರ ಬಂಧನದಿಂದ ಬಿಡುಗಡೆಯಾಗಬೇಕೆಂಬ ಆಕಾಂಕ್ಷೆಯನ್ನು ಸೂಚಿಸುತ್ತದೆ. ತಾವರೆ ಮೊಗ್ಗು ಕೆಸರಿನಿಂದ ಹೊರಹೊಮ್ಮುವ ಸೌಂದರ್ಯದ ಸಂಕೇತವಾಗಿದ್ದರೂ ಇಲ್ಲಿ ಮಹಿಳೆಯ ದುಃಸ್ಥಿತಿಯೊಂದಿಗೆ ಅದರ ಸಂಬಂಧ ಸಂಕೀರ್ಣವಾಗಿದೆ. ಶೋಷಣೆಯ ಕೆಸರಿನಲ್ಲಿಯೂ ಬದುಕು ಮತ್ತು ಮುಕ್ತಿಯ ಸಾಧ್ಯತೆ ಇರುವುದನ್ನು ಈ ಸಂಕೇತ ಸೂಚಿಸಬಹುದು.

ಕೆ.ಕೆ. ಹೆಬ್ಬಾರ್ ಅವರ 'ವೇಶ್ಯಾ' ಚಿತ್ರದಲ್ಲಿ ಮಹಿಳೆಯ ದುರಂತವನ್ನು ಇನ್ನಷ್ಟು ಗಂಭೀರವಾಗಿ ಅಭಿವ್ಯಕ್ತಿಸಲಾಗಿದೆ. ಮಹಿಳೆಯ ಮುಖಕ್ಕೆ ಕಪ್ಪು ಬಣ್ಣ ನೀಡಿರುವುದು ಅವಳ ವ್ಯಕ್ತಿತ್ವ, ಭಾವನೆ ಮತ್ತು ಮಾನವೀಯತೆಯನ್ನು ಸಮಾಜ ಹೇಗೆ ಅಳಿಸಿಹಾಕಿದೆ ಎಂಬುದರ ಸಂಕೇತವಾಗಿ ಓದಬಹುದು. ಅವಳ ಬಳೆಗಳು ಮತ್ತು ಅಲಂಕಾರಗಳು ಗಿರಾಕಿಗಳನ್ನು ಸೆಳೆಯಲು ಅವಳ ಮೇಲೆ ಹೇರಲ್ಪಟ್ಟ ಕೃತಕತೆಯನ್ನು ಸೂಚಿಸುತ್ತವೆ. ದೇಹದ ಬಣ್ಣ ಮತ್ತು ಹಿನ್ನೆಲೆಯ ರಕ್ತವರ್ಣದ ವೈಲಕ್ಷಣ್ಯವು ಕಾಮ, ಹಿಂಸೆ ಮತ್ತು ಶೋಷಣೆಯ ನಡುವಿನ ಸಂಬಂಧವನ್ನು ಬಲಪಡಿಸುತ್ತದೆ.

ಇಲ್ಲಿ ಸಾಹಿತ್ಯ ಮತ್ತು ಚಿತ್ರಕಲೆಯ ನಡುವೆ ಒಂದು ಆಳವಾದ ಸಾಮ್ಯತೆ ಕಾಣುತ್ತದೆ. ನಿರಂಜನರ ಕಾಣೆ, ಕಟ್ಟೀಮನಿಯ ತಾಯವ್ವ, ಅ.ನ.ಕೃ. ಅವರ ಕಮಲ ಮತ್ತು ಹೆಬ್ಬಾರರ 'ವೇಶ್ಯಾ'—ಇವು ವಿಭಿನ್ನ ಮಾಧ್ಯಮಗಳಲ್ಲಿ ಸೃಷ್ಟಿಯಾದರೂ ಒಂದೇ ಸಾಮಾಜಿಕ ಪ್ರಶ್ನೆಯನ್ನು ಕೇಳುತ್ತವೆ: ಮಹಿಳೆಯ ದೇಹವನ್ನು ವಸ್ತುವನ್ನಾಗಿ ಮಾಡುವ ವ್ಯವಸ್ಥೆಗೆ ಹೊಣೆ ಯಾರು?

**ಹೆಣ್ಣಿನ ಶೋಷಣೆ ಮತ್ತು ಮಹಿಳಾ ಸ್ವಾತಂತ್ರ್ಯ:**

ಪ್ರಗತಿಶೀಲ ಸಾಹಿತ್ಯದಲ್ಲಿ ಮಹಿಳಾ ಶೋಷಣೆ ಮತ್ತೊಂದು ಪ್ರಮುಖ ವಸ್ತುವಾಗಿದೆ. ಮಹಿಳೆಯನ್ನು ಕೇವಲ ಕುಟುಂಬದ ಪಾತ್ರಕ್ಕೆ ಸೀಮಿತಗೊಳಿಸುವ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಹಲವು ಕೃತಿಗಳು ಪ್ರಶ್ನೆ ಎತ್ತುತ್ತವೆ. ಈ ಹಿನ್ನೆಲೆಯಲ್ಲಿ ತ.ರಾ.ಸು. ಅವರ 'ಬಿಡುಗಡೆಯ ಬೇಡಿ'ಯಲ್ಲಿ ಮಹಿಳಾ ಸ್ವಾತಂತ್ರ್ಯದ ವಿವಿಧ ರೂಪಗಳನ್ನು ಚಿತ್ರಿಸಲಾಗಿದೆ. ಪ್ರಭಾವತಿ, ಫ್ಲೋರಾ ಮತ್ತು ಲೀಲಾವತಿಯಂತಹ ಪಾತ್ರಗಳ ಮೂಲಕ ಸ್ವಾತಂತ್ರ್ಯ, ಸ್ವೇಚ್ಛಾಚಾರ, ವೈವಾಹಿಕ ಬದುಕು ಮತ್ತು ಸಮಾನತೆಯ ಪ್ರಶ್ನೆಗಳನ್ನು ಪರಿಶೀಲಿಸಲಾಗಿದೆ. ಮಹಿಳಾ ಸ್ವಾತಂತ್ರ್ಯ ಎಂದರೆ ಪುರುಷನನ್ನು ನಿರಾಕರಿಸುವುದಷ್ಟೇ ಅಲ್ಲ; ತನ್ನ ವ್ಯಕ್ತಿತ್ವ, ಬದುಕು ಮತ್ತು ಆಯ್ಕೆಗಳ ಕುರಿತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವೂ ಆಗಿದೆ ಎಂಬ ವಿಚಾರ ಇಲ್ಲಿ ಕಾಣಿಸುತ್ತದೆ.

ನಿರಂಜನರ 'ಕೊನೇ ನಮಸ್ಕಾರ'ದ ವಿಶಾಲಿ ಬಡತನ ಮತ್ತು ಕೆಳಜಾತಿಯ ಹಿನ್ನೆಲೆಯಿಂದ ಬಂದ ಗ್ರಾಮೀಣ ಮಹಿಳೆ. ಅವಳ ಆರ್ಥಿಕ ಅಸಹಾಯಕತೆಯನ್ನು ಪುರುಷರು ದುರುಪಯೋಗಪಡಿಸಿಕೊಳ್ಳುತ್ತಾರೆ. ಆಶ್ರಮವು ರಕ್ಷಣೆ ನೀಡಬೇಕಾದ ಸ್ಥಳವಾಗಿದ್ದರೂ ಅಲ್ಲಿಯೇ

International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

ಅವಳು ಶೋಷಣೆಗೆ ಒಳಗಾಗುತ್ತಾಳೆ. ಇದರಿಂದ ಸಂಸ್ಥೆ ಎಂಬ ಹೆಸರಿನಲ್ಲಿ ಇರುವ ಎಲ್ಲ ವ್ಯವಸ್ಥೆಗಳು ಮಾನವೀಯವಾಗಿರುತ್ತವೆ ಎನ್ನುವುದು ತಪ್ಪು ಎಂಬ ವಾಸ್ತವವನ್ನು ನಿರಂಜನರು ತೋರಿಸುತ್ತಾರೆ.

ಬಸವರಾಜ ಕಟ್ಟೀಮನಿಯವರ 'ಹೆಂಡತಿ'ಯಲ್ಲಿ ಗೌರಿಯ ಬದುಕಿನ ಮೂಲಕ ಕುಟುಂಬದೊಳಗಿನ ಮಹಿಳಾ ಶೋಷಣೆಯ ಮತ್ತೊಂದು ರೂಪ ವ್ಯಕ್ತವಾಗುತ್ತದೆ. ಗಂಡನ ಮನೆಯ ಹಿಂಸೆ, ಅತ್ತಿಗೆಯ ಕ್ರೌರ್ಯ ಮತ್ತು ಗಂಡನ ದಾರಿತಪ್ಪುವಿಕೆ ಮಹಿಳೆಯ ಬದುಕನ್ನು ಅಸ್ಥಿರಗೊಳಿಸುತ್ತವೆ. ಆದರೆ ದುರ್ಗವ್ವಳಂತಹ ಮಹಿಳೆಯ ಮಾನವೀಯ ಸಹಾಯವು ಮತ್ತೊಬ್ಬ ಮಹಿಳೆಯ ಬದುಕಿಗೆ ಆಶ್ರಯವಾಗುತ್ತದೆ. ಹೀಗಾಗಿ ಮಹಿಳಾ ಶೋಷಣೆಯ ಜೊತೆಗೆ ಮಹಿಳಾ ಸಹಕಾರದ ಸಾಧ್ಯತೆಯನ್ನೂ ಈ ಕೃತಿ ಸೂಚಿಸುತ್ತದೆ.

ಚದುರಂಗರ 'ಕ್ವಾಟೆ' ಕಥೆಯಲ್ಲಿ ತಂದೆಯೇ ತನ್ನ ಮಗಳ ಬದುಕಿನ ಮೇಲೆ ಅಧಿಕಾರ ಚಲಾಯಿಸುವುದು ಗಮನಾರ್ಹ. ಹೆಣ್ಣಿನ ಸ್ವಂತ ಆಸೆ, ಭಾವನೆ ಮತ್ತು ವ್ಯಕ್ತಿತ್ವಕ್ಕೆ ಅವಕಾಶವಿಲ್ಲದ ಕುಟುಂಬ ವ್ಯವಸ್ಥೆ ಅವಳನ್ನು ಮಾನಸಿಕ ಹಾಗೂ ದೈಹಿಕ ಸಂಕಷ್ಟಕ್ಕೆ ತಳ್ಳುತ್ತದೆ. ಇಲ್ಲಿ ಶೋಷಣೆ ಹೊರಗಿನ ಪುರುಷರಿಂದ ಮಾತ್ರವಲ್ಲ; ಕುಟುಂಬದ ಒಳಗಿನಿಂದಲೂ ಸಂಭವಿಸಬಹುದು ಎಂಬ ವಾಸ್ತವ ವ್ಯಕ್ತವಾಗುತ್ತದೆ.

**ವಿಧವಾ ಸಮಸ್ಯೆ: ಸಾಮಾಜಿಕ ಬಹಿಷ್ಕಾರ ಮತ್ತು ಬದುಕಿನ ಹೋರಾಟ:**

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿಧವೆಯ ಬದುಕು ದೀರ್ಘಕಾಲದಿಂದ ಅನೇಕ ನಿರ್ಬಂಧಗಳಿಗೆ ಒಳಪಟ್ಟಿತ್ತು. ಪತಿಯ ಮರಣದ ನಂತರ ಮಹಿಳೆಯ ಜೀವನವೇ ಅಪೂರ್ಣವೆಂದು ಪರಿಗಣಿಸುವ ಮನೋಭಾವ ಅವಳ ವ್ಯಕ್ತಿತ್ವವನ್ನು ನಿರಾಕರಿಸುತ್ತಿತ್ತು. ಪ್ರಗತಿಶೀಲ ಸಾಹಿತ್ಯವು ಈ ಅಮಾನವೀಯ ವ್ಯವಸ್ಥೆಯನ್ನು ಪ್ರಶ್ನಿಸಿತು.

ನಿರಂಜನರ 'ಬನಶಂಕರಿ' ಕಾದಂಬರಿ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಅಮ್ಮಿ ಚಿಕ್ಕ ವಯಸ್ಸಿನಲ್ಲೇ ವಿಧವೆಯಾಗುತ್ತಾಳೆ. ನಂತರ ಕುಟುಂಬದ ಆಶ್ರಯವನ್ನೂ ಕಳೆದುಕೊಂಡು ವಿವಿಧ ಸ್ಥಳಗಳಿಗೆ ಅಲೆದಾಡಬೇಕಾಗುತ್ತದೆ. ದೇವಸ್ಥಾನದ ಆಶ್ರಯದಲ್ಲಿ ಬದುಕುವಾಗ ಸಂಬಂಧದ ಪರಿಣಾಮವಾಗಿ ಮಕ್ಕಳಿಗೆ ತಾಯಿಯಾಗುತ್ತಾಳೆ. ಆದರೆ ಸಮಾಜ ಅವಳನ್ನು ಸ್ವೀಕರಿಸುವ ಬದಲು ಬಹಿಷ್ಕರಿಸುತ್ತದೆ. ಮಕ್ಕಳನ್ನು ಬೆಳೆಸಲು ಅವಳು ನಡೆಸುವ ಹೋರಾಟ ಅವಳ ವ್ಯಕ್ತಿತ್ವದ ಶಕ್ತಿಯನ್ನು ತೋರಿಸುತ್ತದೆ.

'ಬನಶಂಕರಿ'ಯಲ್ಲಿ ವಿಧವೆಯ ಸಮಸ್ಯೆ ಕೇವಲ ವೈಯಕ್ತಿಕ ದುರಂತವಲ್ಲ; ಅದು ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಅಮಾನವೀಯತೆಯ ಪ್ರತೀಕವಾಗಿದೆ. ಸಮಾಜ ರಕ್ಷಣೆ ನೀಡಬೇಕಾದ ಸಂದರ್ಭದಲ್ಲಿ ಮಹಿಳೆಯನ್ನು ಅಪರಾಧಿಯನ್ನಾಗಿ ಮಾಡುವ ವ್ಯವಸ್ಥೆಯನ್ನು ನಿರಂಜನರು ಪ್ರಶ್ನಿಸುತ್ತಾರೆ.

International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

'ಬಹಿಷ್ಕೃತ', 'ಒಂದು ಹಿಡಿ ಹುಲ್ಲು', 'ಬಿಡುಗಡೆ', 'ಮೂರು ದುಡ್ಡು', 'ತಿಂಡಿಭಾವ' ಮೊದಲಾದ ಕಥೆಗಳಲ್ಲಿ ಬರುವ ವಿಧವಾ ಪಾತ್ರಗಳೂ ಇದೇ ಸಮಸ್ಯೆಯ ವಿಭಿನ್ನ ಮುಖಗಳನ್ನು ಪ್ರತಿನಿಧಿಸುತ್ತವೆ. ಕೆಲವರು ಪುರುಷರ ಕಾಮುಕತನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ; ಕೆಲವರು ಅತ್ಯಾಚಾರಕ್ಕೆ ಬಲಿಯಾಗುತ್ತಾರೆ; ಇನ್ನೂ ಕೆಲವರು ಸಾಮಾಜಿಕ ನಿರ್ಬಂಧಗಳ ನಡುವೆ ಬದುಕಬೇಕಾಗುತ್ತದೆ.

'ಸ್ಮರಣೆಯೊಂದೇ ಸಾಲದೇ'ಯ ಮೀನಾಕ್ಷಿ ಇದಕ್ಕೆ ಭಿನ್ನವಾದ ಮಾದರಿಯನ್ನು ನೀಡುತ್ತಾಳೆ. ಗಂಡನ ಮರಣದ ನಂತರ ಬದುಕಿನಿಂದ ಹಿಂದೆ ಸರಿಯದೆ ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ಸ್ವೀಕರಿಸಿ ಜೀವನವನ್ನು ಸವಾಲಾಗಿ ಎದುರಿಸುತ್ತಾಳೆ. ಹೀಗಾಗಿ ವಿಧವಾ ಸಮಸ್ಯೆಯ ಒಂದು ಮುಖ ಸಾಮಾಜಿಕ ದಮನವಾದರೆ ಮತ್ತೊಂದು ಮುಖ ಮಹಿಳೆಯ ಬದುಕಿನ ಪುನರ್‌ನಿರ್ಮಾಣವಾಗಿದೆ.

**ಬಡತನ, ಭಿಕ್ಷಾಟನೆ ಮತ್ತು ಸಾಮಾಜಿಕ ಅಸಮಾನತೆ:**

ಬಡತನ ಪ್ರಗತಿಶೀಲ ಸಾಹಿತ್ಯದ ಕೇಂದ್ರ ಸಮಸ್ಯೆಗಳಲ್ಲಿ ಒಂದು. ಹಸಿವು ಮಾನವನ ಬದುಕನ್ನು ಹೇಗೆ ಬದಲಿಸುತ್ತದೆ ಎಂಬುದನ್ನು ಹಲವು ಕೃತಿಗಳು ಚಿತ್ರಿಸುತ್ತವೆ. ತ.ರಾ.ಸು. ಅವರ 'ಪುರುಷಾವತಾರ'ದಲ್ಲಿ ಬೀದಿ ಮಕ್ಕಳ ಬದುಕು ಈ ದೃಷ್ಟಿಯಿಂದ ಗಮನಾರ್ಹ. ಹೋಟೆಲ್‌ಗಳಲ್ಲಿ ಬಿಸಾಡಿದ ಎಂಜಲು ಅನ್ನವನ್ನು ಪಡೆದು ಬದುಕಬೇಕಾದ ಮಕ್ಕಳ ಮೂಲಕ ಬಡತನದ ಕ್ರೌರ್ಯವನ್ನು ಚಿತ್ರಿಸಲಾಗಿದೆ.

ಕಣ್ಣ, ಇಂದು, ಮತ್ತು ಕಂದಸ್ವಾಮಿಯಂತಹ ಪಾತ್ರಗಳು ಸಮಾಜದ ಆರ್ಥಿಕ ಅಸಮಾನತೆಯ ಜೀವಂತ ಪ್ರತಿನಿಧಿಗಳಾಗುತ್ತಾರೆ. ಅವರು ನಗರದಲ್ಲಿ ಬದುಕುತ್ತಿದ್ದರೂ ಅವರ ಬದುಕಿಗೆ ನಗರಾಭಿವೃದ್ಧಿಯ ಫಲಗಳು ತಲುಪಿಲ್ಲ. ಒಂದು ಕಡೆ ಆಧುನಿಕತೆ ಬೆಳೆಯುತ್ತಿದ್ದರೆ ಮತ್ತೊಂದು ಕಡೆ ಹಸಿವಿನಿಂದ ಬಳಲುವ ಮಕ್ಕಳು ಇದ್ದಾರೆ. ಈ ವೈಪರೀತ್ಯವೇ ಪ್ರಗತಿಶೀಲ ಸಾಹಿತ್ಯದ ಸಾಮಾಜಿಕ ಪ್ರಶ್ನೆಯಾಗಿದೆ.

ಕೆ.ಕೆ. ಹೆಬ್ಬಾರ್ ಅವರ 'ಭಿಕ್ಷಕರು' ಚಿತ್ರದಲ್ಲಿ ಇಬ್ಬರು ಬಾಲಕರು ಭಿಕ್ಷೆಯ ನಿರೀಕ್ಷೆಯಲ್ಲಿ ಕುಳಿತಿರುವುದು ಮತ್ತು ನಿಂತಿರುವುದು ಕಂಡುಬರುತ್ತದೆ. ಅವರ ದೇಹದ ಸೊರಗು ಮತ್ತು ಹರಿದ ಬಟ್ಟೆಗಳು ಹಸಿವಿನ ಪರಿಣಾಮವನ್ನು ಸೂಚಿಸುತ್ತವೆ. ಮೇಲ್ಭಾಗದಲ್ಲಿ ಛತ್ರಿ ಹಿಡಿದು ಮೆಟ್ಟಿಲೇರುತ್ತಿರುವ ಶ್ರೀಮಂತರ ಆಕೃತಿಗಳು ಮತ್ತು ಕೆಳಭಾಗದಲ್ಲಿರುವ ಭಿಕ್ಷುಕರ ನಡುವೆ ಉಂಟಾಗುವ ದೃಶ್ಯ ವೈಪರೀತ್ಯವು ವರ್ಗ ಅಂತರವನ್ನು ಸಂಕೇತಿಸುತ್ತದೆ.

'ಪೈಸಾ' ಚಿತ್ರದಲ್ಲಿ ಅಂಗವಿಕಲ ಮಹಿಳೆಯನ್ನು ಬಂಡಿಯಲ್ಲಿ ಕೂರಿಸಿಕೊಂಡು ಭಿಕ್ಷೆ ಬೇಡಿಸುವ ದೃಶ್ಯ ಬಡತನದ ಮತ್ತೊಂದು ಮುಖವನ್ನು ತೋರಿಸುತ್ತದೆ. ದೇಹದ ಅಸಹಾಯಕತೆ ಮತ್ತು ಆರ್ಥಿಕ ಅಸಹಾಯಕತೆ ಒಂದಾಗಿ ಮಹಿಳೆಯ ಬದುಕನ್ನು ಹೇಗೆ

International Journal of Academic Research
ISSN: 2348-7666; Vol.4, Issue-2 (1), February, 2017
Impact Factor: 4.535; Email: drtvramana@yahoo.co.in

ಸಂಕಷ್ಟಕ್ಕೆ ತಳ್ಳುತ್ತವೆ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

'ವೈಪರೀತ್ಯ' ಚಿತ್ರದಲ್ಲಿ ನೀರಿನ ಕೊಳವೆ ಸುತ್ತ ಮಾನವರು ಅನುಭವಿಸುತ್ತಿರುವ ದುಸ್ಥಿತಿಗೆ ವಿರುದ್ಧವಾಗಿ ಆಗಸದಲ್ಲಿ ವಿಮಾನ ಹಾರುತ್ತಿರುವ ದೃಶ್ಯ ಆಧುನಿಕತೆಯ ದೊಡ್ಡ ಪ್ರಶ್ನೆಯನ್ನು ಎತ್ತುತ್ತದೆ. ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ ನಡೆದರೂ ಸಾಮಾಜಿಕ ಸಮಾನತೆ ಏಕೆ ನಿರ್ಮಾಣವಾಗಿಲ್ಲ? ಎಂಬ ಪ್ರಶ್ನೆ ಈ ಚಿತ್ರದ ಅಂತರಾರ್ಥವಾಗಿದೆ. ವಿಮಾನವು ನಾಗರಿಕತೆಯ ಪ್ರಗತಿಯ ಸಂಕೇತವಾಗಿದ್ದರೆ ಕೊಳವೆಯ ಸುತ್ತಲಿನ ಜನರು ಆ ಪ್ರಗತಿಯಿಂದ ಹೊರಗುಳಿದವರ ಪ್ರತಿನಿಧಿಗಳಾಗುತ್ತಾರೆ.

**ಚಿತ್ರಕಲೆಯಲ್ಲಿ ರೈತ ಬದುಕು:**

ಕೆ.ಕೆ. ಹೆಬ್ಬಾರ್ ಅವರ 'ಭೂಮಿ ಒಡೆಯ' ಚಿತ್ರವು ರೈತನನ್ನು ಗೌರವ ಮತ್ತು ಆತ್ಮಗೌರವದೊಂದಿಗೆ ಚಿತ್ರಿಸುತ್ತದೆ. ಹೆಗಲ ಮೇಲೆ ನೇಗಿಲು, ಬೀಜದ ಬುಟ್ಟಿ, ಎರಡು ಎತ್ತುಗಳು ಮತ್ತು ಜೊತೆಯಲ್ಲಿ ಮಗ—ಇವೆಲ್ಲವೂ ಕೃಷಿ ಜೀವನದ ಸಂಕೇತಗಳಾಗಿವೆ. ರೈತನ ದೇಹಭಾಷೆಯಲ್ಲಿ ಆತ್ಮವಿಶ್ವಾಸವಿದೆ. 'ಉಳುವವನೇ ಭೂಮಿಯ ಒಡೆಯ' ಎಂಬ ಸಾಮಾಜಿಕ ಘೋಷಣೆಗೆ ಈ ಚಿತ್ರ ದೃಶ್ಯರೂಪ ನೀಡುತ್ತದೆ.

'ತೆನೆ ಬಡಿಯುತ್ತಿರುವುದು' ಚಿತ್ರವು ಕೃಷಿಯ ಒಂದು ನಿರ್ದಿಷ್ಟ ಹಂತವನ್ನು ಮಾತ್ರವಲ್ಲದೆ ಕೃಷಿ ಸಮುದಾಯದ ಒಟ್ಟಾರೆ ಜೀವನವನ್ನು ಚಿತ್ರಿಸುತ್ತದೆ. ಪುರುಷರು ಮತ್ತು ಮಹಿಳೆಯರು ಸೇರಿ ಕೆಲಸ ಮಾಡುತ್ತಿರುವುದು, ಬೆಳೆ ಕೊಯ್ಯುವುದು, ತೆನೆ ಬಡಿಯುವುದು, ಕಾಳು ಬೇರ್ಪಡಿಸುವುದು, ಹುಲ್ಲು ಮೆದೆ ಹಾಕುವುದು ಮುಂತಾದ ಚಟುವಟಿಕೆಗಳು ಕೃಷಿ ಬದುಕಿನ ಸಾಮೂಹಿಕ ಸ್ವರೂಪವನ್ನು ತೋರಿಸುತ್ತವೆ.

ಈ ಚಿತ್ರದಲ್ಲಿ ಪ್ರಾಣಿಗಳಿಗೂ ಸ್ಥಾನ ನೀಡಿರುವುದು ಗಮನಾರ್ಹ. ಕೋಳಿ ಮತ್ತು ಮರಿಗಳು, ಎತ್ತುಗಳು ಮುಂತಾದವು ಕೃಷಿ ಜೀವನವು ಮನುಷ್ಯ ಮತ್ತು ಪ್ರಕೃತಿಯ ಪರಸ್ಪರ ಸಂಬಂಧದ ಮೇಲೆ ನಿಂತಿದೆ ಎಂಬುದನ್ನು ಸೂಚಿಸುತ್ತವೆ. ಹೀಗಾಗಿ 'ಭೂಮಿ ಒಡೆಯ' ರೈತನ ಆತ್ಮಗೌರವವನ್ನು ಪ್ರತಿನಿಧಿಸಿದರೆ 'ತೆನೆ ಬಡಿಯುತ್ತಿರುವುದು' ಕೃಷಿ ಸಮುದಾಯದ ಸಾಮೂಹಿಕ ಶ್ರಮವನ್ನು ಪ್ರತಿನಿಧಿಸುತ್ತದೆ.

**ಕಾರ್ಮಿಕರ ಸಮಸ್ಯೆ ಮತ್ತು ಶ್ರಮದ ಶೋಷಣೆ:**

ಕಾರ್ಮಿಕ ವರ್ಗದ ಬದುಕು ಪ್ರಗತಿಶೀಲ ಸಾಹಿತ್ಯದ ಪ್ರಮುಖ ವಸ್ತುವಾಗಿದೆ. ಅ.ನ.ಕೃ. ಅವರ 'ಜನತಾ ಜನಾರ್ಧನ' ಕಾರ್ಮಿಕರ ಬದುಕು, ಸಂಘಟನೆ ಮತ್ತು ಶೋಷಣೆಯ ಸಮಸ್ಯೆಗಳನ್ನು ಚಿತ್ರಿಸುತ್ತದೆ. ಆಸ್ಪತ್ರೆಯಂತಹ ಸಂಸ್ಥೆಯಲ್ಲಿಯೂ ಅಧಿಕಾರ ಮತ್ತು ಕಾರ್ಮಿಕರ ನಡುವಿನ ಅಸಮಾನತೆ ಕಂಡುಬರುತ್ತದೆ. ಕಾರ್ಮಿಕರಲ್ಲಿ ಕನ್ನಡಿಗ-ತಮಿಳಿಗ ಎಂಬ ವಿಭಜನೆ ಸೃಷ್ಟಿಸುವ ಮೂಲಕ ಶೋಷಕ ವ್ಯವಸ್ಥೆ ಕಾರ್ಮಿಕರ ಒಗ್ಗಟ್ಟನ್ನು ಹೇಗೆ

ದುರ್ಬಲಗೊಳಿಸುತ್ತದೆ ಎಂಬುದನ್ನು ಕೃತಿ ಸೂಚಿಸುತ್ತದೆ.

ತ.ರಾ.ಸು. ಅವರ 'ಜೀತದ ಜೀವ' ಬಾಲಕಾರ್ಮಿಕ ಮತ್ತು ಜೀತಪದ್ಧತಿಯ ಅಮಾನವೀಯತೆಯನ್ನು ಚಿತ್ರಿಸುತ್ತದೆ. ಓಬನಂತಹ ಜೀತಗಾರನ ಬದುಕಿನಲ್ಲಿ ಸ್ವಾತಂತ್ರ್ಯದ ಕೊರತೆ ಮಾತ್ರವಲ್ಲದೆ ಮಾನವೀಯ ಗೌರವದ ಕೊರತೆಯೂ ಇದೆ. ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು ಇತರ ಕೃತಿಗಳಲ್ಲಿನ ಶ್ರಮಜೀವಿ ಪಾತ್ರಗಳು ಹಾಗೂ ಕಾರಂತರ 'ಚೋಮನ ದುಡಿ'ಯ ಚೋಮನಂತಹ ಪಾತ್ರಗಳು ಭಾರತೀಯ ಗ್ರಾಮೀಣ ಸಮಾಜದಲ್ಲಿನ ಶ್ರಮ ಮತ್ತು ಜಾತಿ ಶೋಷಣೆಯ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ.

ನಿರಂಜನರ 'ವಿಮೋಚನೆ'ಯಲ್ಲಿ ಮಿಲ್ ಮಾಲೀಕರು ಮತ್ತು ಕಾರ್ಮಿಕರ ನಡುವಿನ ವರ್ಗಸಂಘರ್ಷ ಮುಖ್ಯವಾಗಿದೆ. ಶ್ರೀಕಂಠು ಬಂಡವಾಳಶಾಹಿ ವರ್ಗವನ್ನು ಪ್ರತಿನಿಧಿಸಿದರೆ ನಾರಾಯಣ ಕಾರ್ಮಿಕ ವರ್ಗದ ಪ್ರತಿನಿಧಿಯಾಗುತ್ತಾನೆ. ಚಂದ್ರಶೇಖರ ಮಧ್ಯಮವರ್ಗದ ಅಸಹಾಯಕತೆಯ ಪ್ರತಿನಿಧಿಯಾಗಿ ಇವರಿಬ್ಬರ ನಡುವೆ ಸಿಲುಕಿಕೊಳ್ಳುತ್ತಾನೆ. ಈ ಪಾತ್ರದ ಮಾನಸಿಕ ಸಂಘರ್ಷವು ವರ್ಗಸಂಘರ್ಷದ ಮತ್ತೊಂದು ಸಂಕೀರ್ಣ ಆಯಾಮವನ್ನು ತೋರಿಸುತ್ತದೆ.

**ಸಾಹಿತ್ಯ ಮತ್ತು ಚಿತ್ರಕಲೆಯ ನಡುವಿನ ಅಂತರ್‌ಸಂಬಂಧ:**

ಪ್ರಗತಿಶೀಲ ಸಾಹಿತ್ಯ ಮತ್ತು ಚಿತ್ರಕಲೆಯ ನಡುವೆ ಇರುವ ಪ್ರಮುಖ ಸಾಮ್ಯತೆ ಸಾಮಾಜಿಕ ವಾಸ್ತವದ ಕಡೆಗಿನ ಗಮನ. ಎರಡೂ ಮಾಧ್ಯಮಗಳು ಸಾಮಾನ್ಯ ಮನುಷ್ಯನ ಬದುಕನ್ನು ತಮ್ಮ ಸೃಜನಶೀಲತೆಯ ಕೇಂದ್ರಕ್ಕೆ ತಂದಿವೆ. ಆದರೆ ಅವುಗಳ ಅಭಿವ್ಯಕ್ತಿಯ ವಿಧಾನಗಳು ವಿಭಿನ್ನ.

ಸಾಹಿತ್ಯವು ಭಾಷೆಯ ಮೂಲಕ ಪಾತ್ರ, ಘಟನೆ, ಸಂಭಾಷಣೆ, ಮನೋಭಾವ ಮತ್ತು ಸಾಮಾಜಿಕ ಹಿನ್ನೆಲೆಯನ್ನು ವಿಸ್ತಾರವಾಗಿ ನಿರೂಪಿಸಬಲ್ಲದು. ಚಿತ್ರಕಲೆ ಒಂದೇ ದೃಶ್ಯದಲ್ಲಿ ಸಂಕೀರ್ಣವಾದ ಭಾವನೆ ಮತ್ತು ಸಾಮಾಜಿಕ ಅರ್ಥವನ್ನು ಕಟ್ಟಿಕೊಡಬಲ್ಲದು. ಸಾಹಿತ್ಯದಲ್ಲಿ ಕಾಣೆಯ ಬದುಕಿನ ಪೂರ್ಣ ಕಥೆಯನ್ನು ಓದುಗನು ಅನುಸರಿಸಬೇಕಾದರೆ ಹೆಬ್ಬಾರರ 'ವೇಶ್ಯಾ' ಚಿತ್ರದಲ್ಲಿ ಒಂದೇ ಮುಖ, ಒಂದೇ ದೇಹ ಮತ್ತು ಕೆಲವು ಬಣ್ಣಗಳ ಮೂಲಕ ಮಹಿಳೆಯ ದುರಂತವನ್ನು ಅನುಭವಿಸಬಹುದು.

ಪ್ರಗತಿಶೀಲ ಸಾಹಿತ್ಯದಲ್ಲಿ ಬರುವ ವೇಶ್ಯೆ, ವಿಧವೆ, ರೈತ, ಕಾರ್ಮಿಕ, ಭಿಕ್ಷುಕ ಮತ್ತು ಶೋಷಿತ ಮಹಿಳೆಯರು ಚಿತ್ರಕಲೆಯಲ್ಲಿ ಹೊಸ ರೂಪ ಪಡೆದುಕೊಳ್ಳುತ್ತಾರೆ. ಸಾಹಿತ್ಯದ ಸಾಮಾಜಿಕ ವಾಸ್ತವ ಚಿತ್ರಕಲೆಯಲ್ಲಿ ದೃಶ್ಯ ವಾಸ್ತವವಾಗಿ ರೂಪಾಂತರಗೊಳ್ಳುತ್ತದೆ. ಹೀಗಾಗಿ ಈ ಎರಡು ಕಲೆಗಳ ನಡುವೆ ನೇರ ಅನುಕರಣೆಯ ಸಂಬಂಧಕ್ಕಿಂತ 'ಸಾಮಾಜಿಕ ಸಂವೇದನೆಯ ಸಾಮ್ಯತೆ' ಇದೆ ಎಂದು ಹೇಳುವುದು ಹೆಚ್ಚು ಸಮರ್ಪಕ.

**ಕೆ.ಕೆ. ಹೆಬ್ಬಾರ್ ಮತ್ತು ಆರ್.ಎಂ. ಹಡಪದ್: ಮಾನವೀಯತೆಯಿಂದ ಸಾಮಾಜಿಕ ವಾಸ್ತವದವರೆಗೆ:**

ಕೆ.ಕೆ. ಹೆಬ್ಬಾರ್ ಅವರ ಕಲಾ ಲೋಕದಲ್ಲಿ ಮಾನವ ಬದುಕಿನ ಹಲವು ಮುಖಗಳು ಕಾಣಿಸುತ್ತವೆ. ಅವರ ಕಲಾಕೃತಿಗಳಲ್ಲಿ ಗ್ರಾಮೀಣ ಬದುಕು, ಕಾರ್ಮಿಕ, ಭಿಕ್ಷುಕ, ಮಹಿಳೆ, ಬಡತನ ಮತ್ತು ಶೋಷಣೆ ಮುಂತಾದ ವಿಷಯಗಳು ದೃಶ್ಯರೂಪ ಪಡೆದಿವೆ. "ನನ್ನ ಕಲಾಕೃತಿಗಳೆಲ್ಲವೂ ನನ್ನ ಭಾವನೆ ಮತ್ತು ವಿಚಾರಗಳನ್ನು ಅಭಿವ್ಯಕ್ತಿಗೊಳಿಸಬೇಕು ಹಾಗೂ ಸರಳವಾಗಿದ್ದು ಅರ್ಥಪೂರ್ಣವಾಗಿರಬೇಕು" ಎಂಬ ಅವರ ಆಶಯ ಅವರ ಕಲಾ ವಿಧಾನವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

ಹೆಬ್ಬಾರರ ಕಲೆಯಲ್ಲಿ ಸರಳತೆ ಎಂದರೆ ವಿಷಯದ ಸರಳೀಕರಣವಲ್ಲ. ಕೆಲವೇ ರೇಖೆ, ಬಣ್ಣ ಮತ್ತು ಆಕಾರಗಳ ಮೂಲಕ ಗಂಭೀರವಾದ ಸಾಮಾಜಿಕ ಅರ್ಥವನ್ನು ಸೃಷ್ಟಿಸುವುದು ಅವರ ಕಲಾ ವೈಶಿಷ್ಟ್ಯ. 'ವೇಶ್ಯಾ', 'ಭಿಕ್ಷುಕರು', 'ಪೈಸಾ', 'ವೈಪರೀತ್ಯ', 'ಭೂಮಿ ಒಡೆಯ' ಮೊದಲಾದ ಕೃತಿಗಳನ್ನು ನೋಡಿದಾಗ ಅವರ ಕಲೆಯಲ್ಲಿ ಸಾಮಾನ್ಯ ಮನುಷ್ಯನ ಬದುಕಿನ ಬಗ್ಗೆ ಆಳವಾದ ಕಾಳಜಿ ಇರುವುದು ಗೋಚರಿಸುತ್ತದೆ. ಇವರ ಕಲಾಕೃತಿಗಳು ಪ್ರೇಕ್ಷಕರಿಗೆ ನೇರವಾಗಿ ಉಪದೇಶ ನೀಡುವುದಿಲ್ಲ. ಬದಲಾಗಿ ಒಂದು ದೃಶ್ಯವನ್ನು ಮುಂದಿಟ್ಟು ಅದರ ಹಿಂದೆ ಇರುವ ಸಾಮಾಜಿಕ ಪ್ರಶ್ನೆಯನ್ನು ಪ್ರೇಕ್ಷಕರೇ ಯೋಚಿಸುವಂತೆ ಮಾಡುತ್ತವೆ. ಇದೇ ಕಾರಣದಿಂದ ಅವರ ಚಿತ್ರಗಳು ಪ್ರಗತಿಶೀಲ ಸಾಹಿತ್ಯದ ಸಾಮಾಜಿಕ ಚಿಂತನೆಯೊಂದಿಗೆ ಸಂಬಂಧ ಹೊಂದುವ ಸಾಮರ್ಥ್ಯವನ್ನು ಪಡೆದಿವೆ.

ಆರ್.ಎಂ. ಹಡಪದ್ ಅವರ 'ಒರಗಿದ ಹೆಣ್ಣು', 'ಪಾಂಚಾಲಿ', 'ಹಕ್ಕಿ ಮತ್ತು ಮೊಗ್ಗು', 'ಶೋಷಣೆ' ಮೊದಲಾದ ಕೃತಿಗಳಲ್ಲಿ ಮಹಿಳೆಯ ದೇಹ, ಬಂಧನ, ಆಸೆ, ಶೋಷಣೆ ಮತ್ತು ಮುಕ್ತಿಯ ಪ್ರಶ್ನೆಗಳು ಸಂಕೇತಾತ್ಮಕವಾಗಿ ವ್ಯಕ್ತವಾಗುತ್ತವೆ. ಅವರ ಕಲೆಯಲ್ಲಿ ದೇಹವು ಕೇವಲ ಸೌಂದರ್ಯದ ವಸ್ತುವಲ್ಲ; ಅದು ಸಾಮಾಜಿಕ ಅನುಭವದ ದಾಖಲೆ.

ಹೆಬ್ಬಾರ್ ಮತ್ತು ಹಡಪದ್ ಇಬ್ಬರೂ ಪ್ರಯೋಗಶೀಲ ಕಲಾವಿದರು. ಆದರೆ ಅವರ ಪ್ರಯೋಗಶೀಲತೆ ಸಾಮಾಜಿಕ ವಾಸ್ತವದಿಂದ ದೂರವಾಗುವುದಿಲ್ಲ. ರೂಪ ಮತ್ತು ಬಣ್ಣಗಳಲ್ಲಿ ಹೊಸತನವನ್ನು ಹುಡುಕುತ್ತಲೇ ಅವರು ಮನುಷ್ಯನ ಬದುಕಿನ ನೋವು ಮತ್ತು ಸಂಘರ್ಷವನ್ನು ಕಲೆಯೊಳಗೆ ಉಳಿಸಿಕೊಂಡಿದ್ದಾರೆ.

**ಪ್ರಗತಿಶೀಲ ಸಾಹಿತ್ಯದ ರಾಜಕೀಯ ಮತ್ತು ವೈಚಾರಿಕ ಆಯಾಮ:**

ಪ್ರಗತಿಶೀಲ ಸಾಹಿತ್ಯದ ಚರ್ಚೆಯಲ್ಲಿ ಕಮ್ಯುನಿಸಂ ಮತ್ತು ಮಾರ್ಕ್ಸವಾದದ ಪ್ರಭಾವವನ್ನು ನಿರ್ಲಕ್ಷಿಸಲಾಗುವುದಿಲ್ಲ. ವರ್ಗಸಂಘರ್ಷ, ಶ್ರಮದ ಮೌಲ್ಯ, ಖಾಸಗಿ ಆಸ್ತಿ, ಬಂಡವಾಳಶಾಹಿ ಮತ್ತು ಶೋಷಣೆ ಕುರಿತ

ಚಿಂತನೆಗಳು ಪ್ರಗತಿಶೀಲ ಸಾಹಿತ್ಯದ ಹಲವು ಕೃತಿಗಳಲ್ಲಿ ಕಾಣಿಸುತ್ತವೆ.

ಆದರೆ ಸಮಕಾಲೀನ ಸಾಹಿತ್ಯ ಚರ್ಚೆಯಲ್ಲಿ ಕಮ್ಯುನಿಸಂ ಕುರಿತು ಭಿನ್ನಾಭಿಪ್ರಾಯಗಳೂ ಇದ್ದವು. ಕೆಲವು ಲೇಖಕರು ಕಮ್ಯುನಿಸಂನ್ನು ಭಾರತೀಯ ಸಂಸ್ಕೃತಿಗೆ ವಿರುದ್ಧವಾದ ರಾಜಕೀಯ ಮತ್ತು ಸಾಂಸ್ಕೃತಿಕ ಶಕ್ತಿಯೆಂದು ಕಂಡರು. ಅ.ನ.ಕೃ. ಅವರ ಕೆಲವು ನಿಲುವುಗಳಲ್ಲಿ ಈ ವಿರೋಧದ ಧ್ವನಿ ಕಾಣುತ್ತದೆ. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದರೆ ಕಮ್ಯುನಿಸಂನ ಮೂಲ ಆಶಯಗಳಲ್ಲಿ ಮಾನವತಾವಾದ, ವರ್ಗರಹಿತ ಸಮಾಜ, ಶೋಷಣೆಯ ನಿರ್ಮೂಲನೆ ಮತ್ತು ಸಮಾನತೆಯ ಕನಸುಗಳಿವೆ. ಆದ್ದರಿಂದ ಕಮ್ಯುನಿಸಂ ಕುರಿತ ಸಾಹಿತ್ಯಿಕ ಚರ್ಚೆಯನ್ನು ಒಂದೇ ರಾಜಕೀಯ ದೃಷ್ಟಿಕೋನದಲ್ಲಿ ಸೀಮಿತಗೊಳಿಸುವ ಬದಲು ಅದರ ಭಾರತೀಯ ಸಾಮಾಜಿಕ ಸಂದರ್ಭದಲ್ಲಿನ ಸ್ವೀಕಾರ ಮತ್ತು ಪ್ರತಿರೋಧ ಎರಡನ್ನೂ ಪರಿಗಣಿಸುವುದು ಅಗತ್ಯ.

ನಿರಂಜನರ 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ'ದಂತಹ ಕೃತಿಗಳಲ್ಲಿ ಶ್ರಮಜೀವಿಗಳ ಹೋರಾಟಕ್ಕೆ ದೊರೆಯುವ ಮಹತ್ವವು ಈ ವೈಚಾರಿಕ ಹಿನ್ನೆಲೆಯನ್ನು ಸ್ಪಷ್ಟಪಡಿಸುತ್ತದೆ. ಆದಾಗ್ಯೂ ಪ್ರಗತಿಶೀಲ ಸಾಹಿತ್ಯವನ್ನು ಕೇವಲ ಒಂದು ರಾಜಕೀಯ ಸಿದ್ಧಾಂತದ ಸಾಹಿತ್ಯವೆಂದು ಗುರುತಿಸುವುದು ಅದರ ವ್ಯಾಪ್ತಿಯನ್ನು ಕುಗ್ಗಿಸುತ್ತದೆ. ಏಕೆಂದರೆ ಮಹಿಳಾ ಶೋಷಣೆ, ವಿಧವಾ ಸಮಸ್ಯೆ, ಬಡತನ, ಭಿಕ್ಷಾಟನೆ ಮತ್ತು ಮಾನವೀಯ ಸಂಬಂಧಗಳಂತಹ ಹಲವು ಪ್ರಶ್ನೆಗಳು ಯಾವುದೇ ಒಂದು ರಾಜಕೀಯ ಸಿದ್ಧಾಂತದ ಮಿತಿಯನ್ನು ಮೀರಿ ಮಾನವೀಯ ನೆಲೆಯಲ್ಲಿ ಚರ್ಚಿಸಲ್ಪಟ್ಟಿವೆ.

**ಪ್ರಗತಿಶೀಲ ಚಿಂತನೆ ಮತ್ತು ಮಾನವೀಯತೆ:**

ಪ್ರಗತಿಶೀಲ ಸಾಹಿತ್ಯದ ಅತ್ಯಂತ ಮಹತ್ವದ ಅಂಶ ಮಾನವೀಯತೆ. ಶೋಷಿತ ವ್ಯಕ್ತಿಯನ್ನು ಕೇವಲ ವರ್ಗದ ಪ್ರತಿನಿಧಿಯಾಗಿ ನೋಡುವುದಕ್ಕಿಂತ ಅವನ ಅಥವಾ ಅವಳ ನೋವು, ಪ್ರೀತಿ, ಆಸೆ, ಭಯ ಮತ್ತು ಕನಸುಗಳನ್ನು ಗುರುತಿಸುವ ಪ್ರಯತ್ನ ಇಲ್ಲಿ ನಡೆಯುತ್ತದೆ.

'ತುಲಸಿ'ಯಲ್ಲಿ ಬುಡನ್ ಸಾಬಿಯ ಮಾನವೀಯತೆ ಇದಕ್ಕೆ ಉತ್ತಮ ಉದಾಹರಣೆ. ಧರ್ಮ ಮತ್ತು ಸಾಮಾಜಿಕ ಗುರುತುಗಳಿಗಿಂತ ಮನುಷ್ಯತ್ವವೇ ಮುಖ್ಯ ಎಂಬ ಸಂದೇಶ ಕೃತಿಯಲ್ಲಿ ವ್ಯಕ್ತವಾಗುತ್ತದೆ. 'ಇಪ್ಪತ್ತು ರೂಪಾಯಿ'ಯಲ್ಲಿ ಮತ್ತೊಬ್ಬ ಮಹಿಳೆಯ ಬದುಕನ್ನು ಉಳಿಸಲು ಪ್ರಯತ್ನಿಸುವ ಮಹಿಳೆಯ ಕರುಣೆ ಕೂಡ ಇದೇ ಮಾನವೀಯ ದೃಷ್ಟಿಯನ್ನು ತೋರಿಸುತ್ತದೆ.

ಹೆಬ್ಬಾರರ ಭಿಕ್ಷುಕರ ಚಿತ್ರದಲ್ಲಿನ ಮಕ್ಕಳ ದೇಹದ ಸೊರಗು ಕೇವಲ ಬಡತನದ ಅಂಕಿಅಂಶವಲ್ಲ; ಅದು ಪ್ರೇಕ್ಷಕರಲ್ಲಿ ಕರುಣೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಹುಟ್ಟುಹಾಕುವ ದೃಶ್ಯವಾಗಿದೆ. 'ವೇಶ್ಯಾ' ಚಿತ್ರದಲ್ಲಿನ ಭಾವರಹಿತ ಮುಖವು ಪ್ರೇಕ್ಷಕನನ್ನು ಆಕೆಯ ವ್ಯಕ್ತಿತ್ವದ

ಅಳಿವಿನ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಈ ರೀತಿಯಾಗಿ ಸಾಹಿತ್ಯ ಮತ್ತು ಚಿತ್ರಕಲೆ ಎರಡೂ ಮಾನವೀಯ ಸಂವೇದನೆಯನ್ನು ಸಾಮಾಜಿಕ ಪ್ರಶ್ನೆಯೊಂದಿಗೆ ಜೋಡಿಸುತ್ತವೆ.

**ಸಾಹಿತ್ಯ ಮತ್ತು ಚಿತ್ರಕಲೆಯ ತೌಲನಿಕ ನೋಟ:**

ಪ್ರಗತಿಶೀಲ ಸಾಹಿತ್ಯ ಮತ್ತು ಚಿತ್ರಕಲೆಯ ತೌಲನಿಕ ಅಧ್ಯಯನದಿಂದ ಕೆಲವು ಮುಖ್ಯ ಅಂಶಗಳು ಹೊರಹೊಮ್ಮುತ್ತವೆ. ಮೊದಲನೆಯದಾಗಿ, ಎರಡೂ ಮಾಧ್ಯಮಗಳು 'ಸಾಮಾನ್ಯ ಮನುಷ್ಯ'ನನ್ನು ಕೇಂದ್ರಕ್ಕೆ ತಂದಿವೆ. ಎರಡನೆಯದಾಗಿ, ಎರಡೂ ಶೋಷಣೆಯನ್ನು ವೈಯಕ್ತಿಕ ದೋಷವೆಂದು ನೋಡುವುದಕ್ಕಿಂತ ಅದರ ಹಿಂದೆ ಇರುವ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಗುರುತಿಸಿವೆ. ಮೂರನೆಯದಾಗಿ, ಎರಡೂ ಕಲಾರೂಪಗಳಲ್ಲಿ ಮಹಿಳೆಯ ದೇಹ ಮತ್ತು ಬದುಕಿನ ವಸ್ತುವೀಕರಣವನ್ನು ಪ್ರಶ್ನಿಸಲಾಗಿದೆ.

ವೇಶ್ಯಾ ಸಮಸ್ಯೆಯಲ್ಲಿ ಸಾಹಿತ್ಯವು ಮಹಿಳೆಯ ಬದುಕಿನ ಕಥೆಯನ್ನು ವಿವರಿಸಿದರೆ ಚಿತ್ರಕಲೆ ಅವಳ ದೇಹದ ದೃಶ್ಯರೂಪದ ಮೂಲಕ ಶೋಷಣೆಯನ್ನು ಸೂಚಿಸುತ್ತದೆ. ರೈತ ಸಮಸ್ಯೆಯಲ್ಲಿ ಸಾಹಿತ್ಯವು ಹೋರಾಟ, ಜಮೀನ್ದಾರಿಕೆ ಮತ್ತು ವರ್ಗಸಂಘರ್ಷವನ್ನು ವಿವರಿಸಿದರೆ ಹೆಬ್ಬಾರರ ಚಿತ್ರ ರೈತನ ಆತ್ಮಗೌರವ ಮತ್ತು ಶ್ರಮವನ್ನು ದೃಶ್ಯಗೊಳಿಸುತ್ತದೆ. ಕಾರ್ಮಿಕ ಸಮಸ್ಯೆಯಲ್ಲಿ ಸಾಹಿತ್ಯವು ಸಂಘಟನೆ ಮತ್ತು ವರ್ಗಪ್ರಜ್ಞೆಯನ್ನು ನಿರೂಪಿಸಿದರೆ ಚಿತ್ರಕಲೆ ಕಾರ್ಮಿಕನ ದೇಹದ ಶ್ರಮವನ್ನು ಕೇಂದ್ರವಾಗಿಡುತ್ತದೆ. ಭಿಕ್ಷಾಟನೆಯಲ್ಲಿ ಸಾಹಿತ್ಯವು ಹಸಿವಿನ ಕಥೆಯನ್ನು ಹೇಳಿದರೆ ಚಿತ್ರಕಲೆ ಹಸಿವಿನಿಂದ ಸೊರಗಿದ ದೇಹವನ್ನು ತೋರಿಸುತ್ತದೆ.

ಹೀಗಾಗಿ ಸಾಹಿತ್ಯ ಮತ್ತು ಚಿತ್ರಕಲೆ ಪರಸ್ಪರ ಪೂರಕವಾದ ಎರಡು ಸಾಮಾಜಿಕ ದಾಖಲೆಗಳಂತೆ ಕಾರ್ಯನಿರ್ವಹಿಸುತ್ತವೆ. ಒಂದು 'ಹೇಳುತ್ತದೆ'; ಮತ್ತೊಂದು 'ತೋರಿಸುತ್ತದೆ'. ಆದರೆ ಎರಡರ ಗುರಿಯೂ ಸಮಾಜದ ಅಂತರಾಳದಲ್ಲಿರುವ ವಾಸ್ತವವನ್ನು ಪ್ರೇಕ್ಷಕ ಅಥವಾ ಓದುಗನ ಮುಂದೆ ತರುವುದು.

**ಉಪಸಂಹಾರ** (Conclusion):

ಕನ್ನಡದ ಪ್ರಗತಿಶೀಲ ಸಾಹಿತ್ಯ ಮತ್ತು ಸಾಮಾಜಿಕ ಸಂವೇದನೆಯುಳ್ಳ ಚಿತ್ರಕಲೆಯ ತೌಲನಿಕ ಅಧ್ಯಯನವು ಆಧುನಿಕ ಕನ್ನಡ ಸಾಂಸ್ಕೃತಿಕ ಇತಿಹಾಸದ ಒಂದು ಮಹತ್ವದ ಮುಖವನ್ನು ತೆರೆದಿಡುತ್ತದೆ. ಪ್ರಗತಿಶೀಲ ಸಾಹಿತ್ಯವು ಸಾಹಿತ್ಯದ ವಸ್ತುಲೋಕವನ್ನು ವಿಸ್ತರಿಸಿ, ಸಮಾಜದ ಅಂಚಿನಲ್ಲಿದ್ದ ಜನರನ್ನು ಅದರ ಕೇಂದ್ರಕ್ಕೆ ತಂದಿತು. ರೈತ, ಕಾರ್ಮಿಕ, ಭಿಕ್ಷುಕ, ವಿಧವೆ, ವೇಶ್ಯೆ, ಬಡ ಮಹಿಳೆ, ಬಾಲಕಾರ್ಮಿಕ ಮತ್ತು ಶೋಷಿತ ವ್ಯಕ್ತಿಗಳು ಸಾಹಿತ್ಯದ ಮುಖ್ಯ ಪಾತ್ರಗಳಾದರು. ಇದರಿಂದ ಸಾಹಿತ್ಯವು ಸಮಾಜದ ಮೇಲ್ವರ್ಗದ ಅನುಭವಗಳ ದಾಖಲೆ ಮಾತ್ರವಾಗದೆ, ಸಾಮಾನ್ಯ ಜನರ ಬದುಕಿನ ಧ್ವನಿಯಾಗುವ ಅವಕಾಶ ಪಡೆದಿತು.

ಅ.ನ.ಕೃ., ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ ಮತ್ತು ಚದುರಂಗರ ಕೃತಿಗಳಲ್ಲಿ ವೇಶ್ಯಾ ಸಮಸ್ಯೆ, ಮಹಿಳಾ ಶೋಷಣೆ, ವಿಧವಾ ಬದುಕು, ರೈತ ಹೋರಾಟ, ಕಾರ್ಮಿಕ ಸಮಸ್ಯೆ ಮತ್ತು ಬಡತನ ಮುಂತಾದ ಪ್ರಶ್ನೆಗಳು ವಿವಿಧ ರೂಪಗಳಲ್ಲಿ ವ್ಯಕ್ತವಾಗಿವೆ. ಇವರಲ್ಲಿ ಪ್ರತಿಯೊಬ್ಬರೂ ಸಮಸ್ಯೆಯನ್ನು ಒಂದೇ ರೀತಿಯಲ್ಲಿ ನೋಡಿಲ್ಲ. ಕೆಲವರು ಆರ್ಥಿಕ ಕಾರಣಗಳನ್ನು ಗುರುತಿಸಿದರೆ, ಕೆಲವರು ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿದ್ದಾರೆ; ಇನ್ನೂ ಕೆಲವರು ಮಾನವೀಯತೆಯನ್ನು ಪರಿಹಾರದ ಮಾರ್ಗವಾಗಿ ಮುಂದಿಟ್ಟಿದ್ದಾರೆ. ಈ ವೈವಿಧ್ಯವೇ ಪ್ರಗತಿಶೀಲ ಸಾಹಿತ್ಯದ ಬಲ.

ಚಿತ್ರಕಲೆಯ ಕ್ಷೇತ್ರದಲ್ಲಿ ಕೆ.ಕೆ. ಹೆಬ್ಬಾರ್ ಮತ್ತು ಆರ್.ಎಂ. ಹಡಪದ್ ಅವರ ಕೃತಿಗಳು ಜನಜೀವನದ ಸಾಮಾಜಿಕ ವಾಸ್ತವವನ್ನು ದೃಶ್ಯಗೊಳಿಸುತ್ತವೆ. ಹೆಬ್ಬಾರರ 'ವೇಶ್ಯಾ', 'ಭಿಕ್ಷುಕರು', 'ಪೈಸಾ', 'ವೈಪರೀತ್ಯ', 'ಭೂಮಿ ಒಡೆಯ', 'ತೆನೆ ಬಡಿಯುತ್ತಿರುವುದು' ಮೊದಲಾದ ಚಿತ್ರಗಳಲ್ಲಿ ಸಾಮಾನ್ಯ ಮನುಷ್ಯನ ಬದುಕು ಮತ್ತು ಸಾಮಾಜಿಕ ಅಸಮಾನತೆಯ ವಿವಿಧ ಮುಖಗಳು ಕಾಣುತ್ತವೆ. ಹಡಪದ್ ಅವರ 'ಒರಗಿದ ಹೆಣ್ಣು', 'ಪಾಂಚಾಲಿ', 'ಹಕ್ಕಿ ಮತ್ತು ಮೊಗ್ಗು', 'ಶೋಷಣೆ' ಮೊದಲಾದ ಕೃತಿಗಳು ಮಹಿಳೆಯ ದೇಹ, ಶೋಷಣೆ ಮತ್ತು ಬಂಧನದ ಸಂಕೇತಾತ್ಮಕ ಚಿತ್ರಣವನ್ನು ನೀಡುತ್ತವೆ. ನಟರಾಜ್ ಮತ್ತು ಚಂದ್ರನಾಥ ಆಚಾರ್ಯರ ಕೃತಿಗಳು ಕಾರ್ಮಿಕ ಮತ್ತು ಬಾಲಕಾರ್ಮಿಕರ ಬದುಕನ್ನು ದೃಶ್ಯಗೊಳಿಸುತ್ತವೆ.

ಸಾಹಿತ್ಯ ಮತ್ತು ಚಿತ್ರಕಲೆ ಎರಡೂ ತಮ್ಮದೇ ಆದ ಅಭಿವ್ಯಕ್ತಿ ವಿಧಾನಗಳನ್ನು ಹೊಂದಿದ್ದರೂ ಅವುಗಳ ಸಾಮಾಜಿಕ ಸಂವೇದನೆಯಲ್ಲಿ ಗಾಢವಾದ ಸಾಮ್ಯತೆ ಇದೆ. ಪ್ರಗತಿಶೀಲ ಸಾಹಿತ್ಯವು ಶೋಷಿತನ ಕಥೆಯನ್ನು ಹೇಳಿದರೆ ಚಿತ್ರಕಲೆ ಶೋಷಿತನ ಮುಖವನ್ನು ತೋರಿಸುತ್ತದೆ. ಸಾಹಿತ್ಯವು ಹಸಿವಿನ ಅನುಭವವನ್ನು ನಿರೂಪಿಸಿದರೆ ಚಿತ್ರಕಲೆ ಹಸಿವಿನಿಂದ ಸೊರಗಿದ ದೇಹವನ್ನು ತೋರಿಸುತ್ತದೆ. ಸಾಹಿತ್ಯವು ರೈತನ ಹೋರಾಟವನ್ನು ವಿವರಿಸಿದರೆ ಚಿತ್ರಕಲೆ ಅವನ ಶ್ರಮ ಮತ್ತು ಆತ್ಮಗೌರವವನ್ನು ದೃಶ್ಯಗೊಳಿಸುತ್ತದೆ. ಸಾಹಿತ್ಯವು ಮಹಿಳೆಯ ಶೋಷಣೆಯ ಕಾರಣಗಳನ್ನು ವಿಶ್ಲೇಷಿಸಿದರೆ ಚಿತ್ರಕಲೆ ಆ ಶೋಷಣೆಯ ದೇಹೀಕೃತ ರೂಪವನ್ನು ಪ್ರೇಕ್ಷಕನ ಮುಂದೆ ಇಡುತ್ತದೆ.

ಹೀಗಾಗಿ ಪ್ರಗತಿಶೀಲ ಸಾಹಿತ್ಯ ಮತ್ತು ಸಾಮಾಜಿಕ ವಾಸ್ತವದ ನೆಲೆಯಲ್ಲಿನ ಚಿತ್ರಕಲೆ ಎರಡೂ ತಮ್ಮ ಕಾಲದ ಸಮಾಜದ ಅಸಮಾನತೆಗಳನ್ನು ದಾಖಲಿಸಿದ ಸೃಜನಶೀಲ ಸಾಕ್ಷ್ಯಗಳಾಗಿವೆ. ಅವು ಕೇವಲ ಸಮಸ್ಯೆಗಳನ್ನು ಬಿಂಬಿಸುವುದಲ್ಲದೆ, ಅವುಗಳ ಬಗ್ಗೆ ಪ್ರೇಕ್ಷಕ ಮತ್ತು ಓದುಗರಲ್ಲಿ ಪ್ರಶ್ನಿಸುವ ಮನೋಭಾವವನ್ನು ಹುಟ್ಟುಹಾಕುತ್ತವೆ. ಈ ಅರ್ಥದಲ್ಲಿ ಪ್ರಗತಿಶೀಲತೆ ಒಂದು ಕಾಲಘಟ್ಟಕ್ಕೆ ಸೀಮಿತವಾದ ಸಾಹಿತ್ಯಿಕ ಅಥವಾ ಕಲಾತ್ಮಕ ಚಳುವಳಿಯಲ್ಲ; ಅದು

ಅನ್ಯಾಯದ ವಿರುದ್ಧ ಮಾನವೀಯತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಸೃಜನಶೀಲ ದೃಷ್ಟಿಕೋನವಾಗಿದೆ.

ನವೋದಯದಿಂದ ಪ್ರಗತಿಶೀಲತೆಗೆ ಮತ್ತು ಅಲ್ಲಿಂದ ನವ್ಯತೆಗೆ ಸಾಗುವ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಗತಿಶೀಲ ಚಿಂತನೆ ಒಂದು ನಿರ್ಣಾಯಕ ಕೊಂಡಿಯಾಗಿದೆ. ಅದು ಸಾಹಿತ್ಯವನ್ನು ಸಮಾಜದೊಂದಿಗೆ ಮತ್ತಷ್ಟು ಗಟ್ಟಿಯಾಗಿ ಜೋಡಿಸಿತು. ಅದೇ ರೀತಿ ಚಿತ್ರಕಲೆಯಲ್ಲಿಯೂ ಜನಸಾಮಾನ್ಯರ ಬದುಕು, ದೇಹ, ಶ್ರಮ ಮತ್ತು ನೋವು ಕಲಾತ್ಮಕ ಅಭಿವ್ಯಕ್ತಿಯ ಮಾನ್ಯ ವಸ್ತುಗಳಾಗುವಂತೆ ಮಾಡಿತು. ಆದ್ದರಿಂದ ಕನ್ನಡದ ಆಧುನಿಕ ಸಾಹಿತ್ಯ ಮತ್ತು ಕಲಾ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಪ್ರಗತಿಶೀಲ ಸಾಹಿತ್ಯ ಮತ್ತು ಸಾಮಾಜಿಕ ವಾಸ್ತವದ ಚಿತ್ರಕಲೆಯನ್ನು ಪ್ರತ್ಯೇಕವಾಗಿ ನೋಡುವುದಕ್ಕಿಂತ ಅವುಗಳ ಅಂತರ್‌ಸಂಬಂಧವನ್ನು ಗುರುತಿಸುವುದು ಹೆಚ್ಚು ಅರ್ಥಪೂರ್ಣವಾಗಿದೆ.

ಒಟ್ಟಿನಲ್ಲಿ, ಪ್ರಗತಿಶೀಲ ಸಾಹಿತ್ಯ ಮತ್ತು ಚಿತ್ರಕಲೆ ಎರಡೂ ಸಮಾಜದ 'ನಿರ್ಲಕ್ಷಿತ ಮುಖ'ವನ್ನು ದೃಶ್ಯ ಮತ್ತು ಶಬ್ದದ ರೂಪದಲ್ಲಿ ದಾಖಲಿಸಿವೆ. ಶೋಷಿತ ಮನುಷ್ಯನ ಬದುಕನ್ನು ಕಲೆಯ ಕೇಂದ್ರಕ್ಕೆ ತಂದು, ಅವನ ನೋವನ್ನು ಸಾಮಾಜಿಕ ಪ್ರಶ್ನೆಯನ್ನಾಗಿ ಪರಿವರ್ತಿಸಿರುವುದೇ ಅವುಗಳ ಶಾಶ್ವತ ಮಹತ್ವವಾಗಿದೆ. ಈ ಕಾರಣದಿಂದ ಪ್ರಗತಿಶೀಲ ಸಾಹಿತ್ಯ ಮತ್ತು ಸಾಮಾಜಿಕ ವಾಸ್ತವದ ಚಿತ್ರಕಲೆ ಕನ್ನಡದ ಆಧುನಿಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಾನವೀಯತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪರವಾದ ಮಹತ್ವದ ಸೃಜನಶೀಲ ಚಳುವಳಿಗಳಾಗಿ ಗುರುತಿಸಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು** (References):


1. ಶೇಷಗಿರಿ ರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೨೦೦೮
2. ಹಿರೇಮಠ ಎಸ್.ಎಂ., ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೩
3. ಬಸವರಾಜ ಕಟ್ಟಮನಿ, ಕಾದಂಬರಿಕಾರನ ಕಥೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,೧೯೮೧
4. ಮರಿಶಾಮಾಚಾರ್ ಎನ್., ಹೆಬ್ಬಾರ್, ಸಿ.ಎಂ.ಎನ್ ಪ್ರಕಾಶನ, ಬೆಂಗಳೂರು - ೧೯೮೩
5. ಮರಿಶಾಮಾಚಾರ್ ಎನ್., (ಸಂ), ಆರ್.ಎಂ. ಹಡಪದ್, ಸಂಯೋಜಿತ, ಬೆಂಗಳೂರು ೧೯೯೭
6. ಶಿವರುದ್ರಪ್ಪ ಜಿ.ಎಸ್., (ಸಂ), ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯
7. ಶ್ರೀನಿವಾಸ ರಾಜು ಚಿ., ಬಸವರಾಜ ಕಲ್ಗುಡಿ., (ಸಂ), ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೨೦೦೨
8. ಸನದಿ ಬಿ.ಎ., ಕಲೆ ಮತ್ತು ಮನುಷ್ಯ ಸಂಸ್ಕೃತಿ, ಕಾಲಗತಿ ಪ್ರಕಾಶನ, ರಾಯಬಾಗ, ೧೯೯೦

9. ರವೀಂದ್ರನಾಥ ಟಾಗೋರ್, ಅನು: ಶ್ರೀಮತಿ ಎಚ್.ಎಸ್., ಕಲೆಯ ಅರ್ಥ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೧೯೮೮
10. ಸ್ವೆತಾಸ್ಲೋವ್ ರೋರಿಕ್, ಅನು: ರಾಘವೇಂದ್ರ ರಾವ್ ಎಚ್.ಎಸ್., ಕಲೆಯಲ್ಲಿ ಮಾನವತಾವಾದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೪
11. ಕೆ.ಕೆ.ಹೆಬ್ಬಾರ್ (ಜೀವನ ಮತ್ತು ಕಲೆಯನ್ನು ಕುರಿತ ಕೃತಿ), ಮರಿಶಾಮಾಚಾರ್.ಎನ್., ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೩
12. ಚಂದ್ರಕಾಂತ ಕುಸನೂರ, ಸಾಹಿತ್ಯ ಮತ್ತು ಚಿತ್ರಕಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩
13. ಮರಿಶಾಮಾಚಾರ್.ಎನ್., ಭಾರತದಲ್ಲಿ ಸಮಕಾಲೀನ ಕಲೆ, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು, ೧೯೮೭
14. ಕೇಶವಶರ್ಮ ಕೆ., ಮಾರ್ಕ್ಸವಾದಿ ಸಾಹಿತ್ಯ ವಿಮರ್ಶೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮
15. ಮರಿಶಾಮಾಚಾರ್ ಎನ್., ಸಾಹಿತ್ಯದಲ್ಲಿ ಚಿತ್ರಕಲೆ, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು, ೧೯೮೯
16. RADHAKAMAL MUKHERJEE, THE SOCIAL FUNCTION OF ART, Bharatiya Vidya Prakashan, DELHI,1988